ವಿಜಯಪುರ | ಸಂಪುಟ 04 | ಸಂಚಿಕೆ 058 | ಪುಟ 04 | ₹ 3.00
https://udayarashminews.com
udayarashmi 90088 88340

# ಉದಯ ರಶ್ಮಿ

Udayarashmi Kannada Daily
ಜನಪರ-ಜೀವಪರ
ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ
Editor: Indushekhar Manur

editor.udayarashmi@gmail.com | RNI NO: KARKAN/2023/86203 | ರವಿವಾರ, ಏಪ್ರಿಲ್, 19, 2026

"ಮುಸ್ಲಿಮರು ಕಾಂಗ್ರೆಸ್ ಪಕ್ಷದ ಬೆನ್ನಿಗೆ ನಿಂತಿದ್ದಾರೆ. ನಾವು, ಮುಸ್ಲಿಮರು ಯಾವತ್ತೂ ಸಹೋದರರಿದ್ದಂತೆ. ಹೀಗಾಗಿ ಕಾಂಗ್ರೆಸ್ ಅಲ್ಪಸಂಖ್ಯಾತರನ್ನ ನಿರ್ಲಕ್ಷ್ಯ ಮಾಡಿಲ್ಲ ಮತ್ತು ಅವರನ್ನು ಗುರಿಯಾಗಿಸುವ ಪ್ರಶ್ನೆಯೇ ಇಲ್ಲ"



■ ಡಾ.ಜಿ.ಪರಮೇಶ್ವರ
ಗೃಹ ಸಚಿವರು

### ದೇಶದ ಮಹಿಳೆಯರ ಕ್ಷಮೆ ಕೋರಿದ ಪ್ರಧಾನಿ

## ಪ್ರತಿಪಕ್ಷಗಳ ಪಾಪದ ಕೆಲಸವನ್ನು ಜನರು ಎಂದಿಗೂ ಮರೆಯಲ್ಲ: ಮೋದಿ ವಾಗ್ದಾಳಿ



ನವದೆಹಲಿ: ಕಾಂಗ್ರೆಸ್ ಮತ್ತು ಮಿತ್ರ ಪಕ್ಷಗಳ ಪಾಪದ ಕೆಲಸವನ್ನು ದೇಶದ ಜನರು ಎಂದಿಗೂ ಕ್ಷಮಿಸುವುದಿಲ್ಲ ಎಂದು ಪ್ರತಿಪಕ್ಷಗಳ ವಿರುದ್ಧ ಪ್ರಧಾನಿ ನರೇಂದ್ರ ಮೋದಿ ವಾಗ್ದಾಳಿ ನಡೆಸಿದರು.

ಲೋಕಸಭೆಯಲ್ಲಿ ಮಹಿಳಾ ಮೀಸಲಾತಿ ಮಸೂದೆಗೆ ಸೋಲಾದ ಮರುದಿನವೇ ದೇಶವನ್ನು ಉದ್ದೇಶಿ ಪ್ರಧಾನಿ ಭಾಷಣ ಮಾಡಿ, ಸ್ವಾರ್ಥ ರಾಜಕೀಯಕ್ಕಾಗಿ ದೇಶದ ಮಹಿಳೆಯರ ಸಬಲೀಕರಣದ ಹೋರಾಟವನ್ನು ಸ್ಥಗಿತಗೊಳಿಸಿದ ವಿರೋಧ ಪಕ್ಷಗಳನ್ನು ಟೀಕಿಸಿದರು. ಇದೇ ವೇಳೆ ದೇಶದ ಎಲ್ಲ ಮಹಿಳೆಯರಿಂದ ಕ್ಷಮೆಯಾಚಿಸಿದರು.

ಕಾಂಗ್ರೆಸ್, ಟಿಎಂಸಿ ಮತ್ತು ಡಿಎಂಕೆ ಸೇರಿ ಮಿತ್ರ ಪಕ್ಷಗಳು ನಮ್ಮ ಮಹಿಳಾ ಶಕ್ತಿಯ ವಿರುದ್ಧ ತಮ್ಮ ಸ್ವಾರ್ಥ ರಾಜಕೀಯಕ್ಕಾಗಿ ಏನು ಮಾಡಿವೆ ಎಂಬುದನ್ನು ದೇಶದ ಮಹಿಳೆಯರು ನೋಡಿದ್ದಾರೆ. ಮಹಿಳಾ ಮೀಸಲಾತಿ ಮಸೂದೆಯನ್ನು ವಿರೋಧಿಸುವ ಮೂಲಕ ಪ್ರತಿಪಕ್ಷಗಳು ಪಾಪ ಮಾಡಿವೆ ಮತ್ತು ಇದಕ್ಕಾಗಿ ಅವರಿಗೆ ಖಂಡಿತವಾಗಿಯೂ ಶಿಕ್ಷೆಯಾಗುತ್ತದೆ ಎಂದು ಪ್ರಧಾನಿ ತಿಳಿಸಿದರು.

ಶಾಸನಸಭೆಗಳಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ಮತ್ತು ಲೋಕಸಭಾ ಕ್ಷೇತ್ರಗಳನ್ನು ಹೆಚ್ಚಿಸುವ ಸಂವಿಧಾನ ತಿದ್ದುಪಡಿ ಮಸೂದೆಗೆ ಲೋಕಸಭೆಯಲ್ಲಿ ಶುಕ್ರವಾರ ಸೋಲಾಗಿದೆ. ನಿನ್ನೆ ಮಸೂದೆ ಪರ ಕೇವಲ 298 ಮತಗಳು ಬಿದ್ದರೆ, ಮಸೂದೆಯ ವಿರುದ್ಧವಾಗಿ 230 ಮತಗಳು ಬಂದಿದ್ದವು. ಈ ಮೂಲಕ ಮತ ಚಲಾಯಿಸಿದ 528 ಸದಸ್ಯರಲ್ಲಿ, ಬಹುಮತಕ್ಕೆ ಮೂರನೇ ಎರಡರಷ್ಟು ಅಂದರೆ 352 ಮತಗಳ ಅಗತ್ಯವಿತ್ತು. ಆದರೆ ನರೇಂದ್ರ ಮೋದಿ ಸರ್ಕಾರಕ್ಕೆ ಲೋಕಸಭೆಯಲ್ಲಿ ಬಹುಮತವಿರಲಿಲ್ಲ. ಆದರೆ ಕೇವಲ 298 ಮತಗಳು ಬಂದಿದ್ದರಿಂದ ಮಸೂದೆಗೆ ಸೋಲಾಗಿತ್ತು. ಇದರೊಂದಿಗೆ ಸಂವಿಧಾನ ತಿದ್ದುಪಡಿ ಮಸೂದೆ ಮೂಲಕ 2029ರಲ್ಲಿ ಶಾಸನಸಭೆಗಳಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ಜಾರಿಗೊಳಿಸುವ ಮತ್ತು ಲೋಕಸಭೆಯ ಸ್ಥಾನಗಳ ಸಂಖ್ಯೆಯನ್ನು ಹೆಚ್ಚಿಸುವ ಕೇಂದ್ರ ಸರ್ಕಾರದ ನಿರ್ಧಾರಕ್ಕೆ ಹಿನ್ನಡೆಯಾಗಿತ್ತು.

# ದ. ಭಾರತದಲ್ಲಿ ಸುಪ್ರೀಂ ಕೋರ್ಟ್ ಪೀಠ ಸ್ಥಾಪನೆ ಅಗತ್ಯ

**ಬೆಂಗಳೂರಿನಲ್ಲಿ ನಡೆದ ನ್ಯಾಯಾಂಗ ಅಧಿಕಾರಿಗಳ 22ನೇ ದ್ವೈವಾರ್ಷಿಕ ರಾಜಮಟ್ಟದ ಸಮ್ಮೇಳನದಲ್ಲಿ ಸಿಎಂ ಸಿದ್ದರಾಮಯ್ಯ ಅಭಿಮತ**



ಬೆಂಗಳೂರು: ರಾಜ್ಯದ ಉಚ್ಚ ನ್ಯಾಯಾಲಯಕ್ಕೆ ಪ್ರವೇಶವನ್ನು ಸುಧಾರಿಸಬೇಕೆನ್ನುವ ಬಲವಾದ ಅಗತ್ಯವಿದೆ. ದಕ್ಷಿಣ ಭಾರತದಲ್ಲಿ ಸರ್ವೋಚ್ಚ ನ್ಯಾಯಾಲಯದ ಪೀಠ ಸ್ಥಾಪನೆಯಾದರೆ ನ್ಯಾಯವನ್ನು ಖಾತ್ರಿಪಡಿಸುವ ನಿಟ್ಟಿನಲ್ಲಿ ಬಹು ದೊಡ್ಡ ಹೆಜ್ಜೆಯನ್ನು ಇರಿಸಿದಂತಾಗುತ್ತದೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ.

ಬೆಂಗಳೂರಿನ ಜಿಕೆವಿಕೆಯ ಡಾ. ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಭಾಂಗಣದಲ್ಲಿ ನಡೆದ ನ್ಯಾಯಾಂಗ ಅಧಿಕಾರಿಗಳ 22ನೇ ದ್ವೈವಾರ್ಷಿಕ ರಾಜಮಟ್ಟದ ಸಮ್ಮೇಳನದಲ್ಲಿ ಮಾತನಾಡಿದ ಅವರು, ಪ್ರಸಕ್ತ ಕಾಲಘಟ್ಟದಲ್ಲಿ ಕಾನೂನು ಮತ್ತು ತಂತ್ರಜ್ಞಾನವು ಪ್ರತ್ಯೇಕ ಕ್ಷೇತ್ರಗಳಾಗಿ ಉಳಿದಿಲ್ಲ. ಈಗ ಮುಂದುವರೆದು ನ್ಯಾಯಾಂಗ ಕ್ಷೇತ್ರಕ್ಕೆ ಕೃತಕ ಬುದ್ಧಿಮತ್ತೆಯ ಪ್ರವೇಶವಾಗಿದೆ. ಅದರಿಂದಾಗಿ ಆಡಳಿತ, ಹಕ್ಕುಗಳು ಮತ್ತು ನ್ಯಾಯದ ಸ್ವರೂಪವನ್ನು ರೂಪಿಸುವ ಪರಸ್ಪರ ಸಂಬಂಧ ಹೊಂದಿರುವ ಶಕ್ತಿಗಳ ನಡುವೆ ನಿರ್ಣಾಯಕ ಹಂತದಲ್ಲಿ ನಾವು ಇಂದು ನಿಂತಿದ್ದೇವೆ. ಈ ಪಯಣದಲ್ಲಿ ನ್ಯಾಯಾಂಗಕ್ಕೆ ಅದರ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಗೌರವಿಸುತ್ತಲೇ ಅದಕ್ಕೆ ಬೆಂಬಲ ನೀಡುವುದು, ಸಕ್ರಿಯಗೊಳಿಸುವುದು ಮತ್ತು ಬಲಪಡಿಸುವುದು ಆಡಳಿತದ ಪಾತ್ರ. ನ್ಯಾಯಾಂಗ ಮೂಲಭೂತ ಸೌಕರ್ಯ, ಡಿಜಿಟಲ್ ಪರಿವರ್ತನೆ, ನಾವೀನ್ಯತೆ ಹಾಗೂ ನ್ಯಾಯದಾನವು ಒಟ್ಟಾಗಿ ಪ್ರಗತಿ ಹೊಂದಲು ಸೂಕ್ತವಾದ ಪರಿಸರ ವ್ಯವಸ್ಥೆಯನ್ನು ಸೃಷ್ಟಿಸಲು ಕರ್ನಾಟಕ ಸರ್ಕಾರವು ಬದ್ಧವಾಗಿದೆ ಎಂದರು.

ನ್ಯಾಯದಾನ ವ್ಯವಸ್ಥೆಗೆ ವೇಗ ಮತ್ತು ಪ್ರವೇಶವನ್ನು ಒದಗಿಸಲು ಕರ್ನಾಟಕದಲ್ಲಿ ನಾವು ಖಚಿತ ಸುಧಾರಣೆಗಳನ್ನು ಕೈಗೊಂಡಿದ್ದೇವೆ. ಕಾಲಬದ್ಧ ಪ್ರಕರಣ ನಿರ್ವಹಣೆ, ಸರಹದ್ದುಗಳ ಪುನರ್ ರಚನೆಯ ಮೂಲಕ ಉಚ್ಚ ನ್ಯಾಯಾಲಯಗಳ ಹೊರೆಯನ್ನು ತಗ್ಗಿಸುವುದು ಹಾಗೂ ಸರ್ಕಾರಿ ವ್ಯಾಜ್ಯ ಅಭ್ಯಾಸಗಳನ್ನು ಬಲಪಡಿಸಲಾಗುತ್ತಿದೆ ಎಂದಿದ್ದಾರೆ.

ನಮ್ಮ ಪ್ರಜಾಪ್ರಭುತ್ವದ ಮೂಲಾಧಾರವಾಗಿರುವ ನ್ಯಾಯಾಂಗ ಸ್ವಾತಂತ್ರ್ಯವನ್ನು ಬಾಹ್ಯ ಒತ್ತಡಗಳಿಂದ ಮಾತ್ರವಲ್ಲದೆ ಸೂಕ್ಷ್ಮ ತಾಂತ್ರಿಕ ಅವಲಂಬನೆಯಿಂದಲೂ ಸಂರಕ್ಷಿಸುವ ಹೊಣೆಗಾರಿಕೆ ನಮ್ಮ ಮೇಲಿದೆ ಎಂದು ಸಿಎಂ ನುಡಿದರು.

## ವಿಜಯಪುರ ಲೋಕಾಯುಕ್ತ ಬಲೆಗೆ ಸರ್ಕಾರಿ ಸಿಬ್ಬಂದಿ!

■ ಉದಯರಶ್ಮಿ ದಿನಪತ್ರಿಕೆ





**ವಿಜಯಪುರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಇಬ್ಬರು ಸಿಬ್ಬಂದಿ ಲಂಚ ಸ್ವೀಕರಿಸುವಾಗ ಬಂಧನ**

ವಿಜಯಪುರ: ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಇಬ್ಬರು ಸಿಬ್ಬಂದಿಗಳು ಲಂಚ ಸ್ವೀಕರಿಸುವಾಗ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದ ಘಟನೆ ಶನಿವಾರ ನಡೆದಿದೆ.

ಫಿರ್ಯಾದಿದಾರರು ವಿಜಯಪುರ ಲೋಕಾಯುಕ್ತ ಪೊಲೀಸ್ ಠಾಣೆಗೆ ನೀಡಿದ ದೂರಿನಂತೆ, ಭಾರತ ಪೆಟ್ರೋಲಿಯಂ ಕಾರ್ಪೋರೇಶನ್ ಲಿಮಿಟೆಡ್‌ಗೆ ಸಂಬಂಧಿಸಿದ ಪೆಟ್ರೋಲ್ ಬಂಕ್ ತೆರೆಯಲು ಸ್ಥಳದ ನಕ್ಷೆ ಅನುಮೋದನೆ ನೀಡುವ ಸಂಬಂಧ, ದ್ವಿತೀಯ ದರ್ಜೆ ಸಹಾಯಕ ಅರವಿಂದ ಪವಾರ ಮತ್ತು ಕಂಪ್ಯೂಟರ್ ಆಪರೇಟರ್ ಅಯುಬ ತೊನಶ್ಯಾಳ ಅವರು ರೂ.15,000 ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದರು.

ಇದನ್ನಾಧರಿಸಿ ಲೋಕಾಯುಕ್ತ ಪೊಲೀಸರು ಇಂದು ಮಧ್ಯಾಹ್ನ ಟ್ರ್ಯಾಪ್ ಕಾರ್ಯಾಚರಣೆ ನಡೆಸಿ, ಆರೋಪಿತರು ಲಂಚದ ಹಣ ಸ್ವೀಕರಿಸುತ್ತಿದ್ದ ವೇಳೆ ಅವರನ್ನು ಬಲೆಗೆ ಬೀಳಿಸಿ ಬಂಧಿಸಿದ್ದಾರೆ. ಲಂಚದ ಹಣವನ್ನು ವಶಪಡಿಸಿಕೊಳ್ಳಲಾಗಿದೆ.

ಈ ಕಾರ್ಯಾಚರಣೆಯನ್ನು ಕರ್ನಾಟಕ ಲೋಕಾಯುಕ್ತ ವಿಜಯಪುರ ಪೊಲೀಸ್ ಅಧೀಕ್ಷಕರ ಮಾರ್ಗದರ್ಶನದಲ್ಲಿ, ಪೊಲೀಸ್ ಉಪಾಧೀಕ್ಷಕರ ನೇತೃತ್ವದಲ್ಲಿ ಇನ್ಸ್‌ಪೆಕ್ಟರ್‌ಗಳು ಮತ್ತು ಸಿಬ್ಬಂದಿಗಳ ತಂಡ ಯಶಸ್ವಿಯಾಗಿ ನಡೆಸಿದೆ. ಪ್ರಕರಣದ ತನಿಖೆ ಮುಂದುವರಿದಿದೆ.

## ಏ.24ಕ್ಕೆ ಮೇರುನಟ ಡಾ.ರಾಜ್‌ಕುಮಾರ್ ಜನ್ಮ ದಿನಾಚರಣೆ

**ಡಾ.ರಾಜ್ ಜನ್ಮ ದಿನಾಚರಣೆ ಅರ್ಥಪೂರ್ಣಗೊಳಿಸಲು ಅಪರ ಜಿಲ್ಲಾಧಿಕಾರಿ ಡಾ.ಔದ್ರಾಮ ಅಧಿಕಾರಿಗಳಿಗೆ ಸೂಚನೆ**

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ವಿಶೇಷ ನಟನೆ ಮೂಲಕ ಕನ್ನಡಿಗರ ಮನೆ-ಮಾತಾದ ನಟ ಸಾರ್ವಭೌಮ ಡಾ.ರಾಜಕುಮಾರ್ ಅವರ ಜನ್ಮ ದಿನಾಚರಣೆಯ ಕಾರ್ಯಕ್ರಮವನ್ನು ಜಿಲ್ಲೆಯಲ್ಲಿ ವಿಶಿಷ್ಟವಾಗಿ ಆಚರಿಸಲು ಅಧಿಕಾರಿಗಳು ವಿಶೇಷ ಮುತುವರ್ಜಿ ವಹಿಸಿ ಕಾರ್ಯಕ್ರಮಕ್ಕೆ ಸಿದ್ಧತೆ ಕೈಗೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿ ಡಾ. ಔದ್ರಾಮ ಹೇಳಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಡಾ.ರಾಜ್‌ಕುಮಾರ್ ಜನ್ಮ ದಿನಾಚರಣೆಯ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲಾಡಳಿತ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಮೇರುನಟ ಡಾ.ರಾಜ್‌ಕುಮಾರ್ ಅವರ ಜನ್ಮ ದಿನಾಚರಣೆಯ ಕಾರ್ಯಕ್ರಮವನ್ನು ಏ.24ರಂದು ಬೆಳಿಗ್ಗೆ 9 ಗಂಟೆಗೆ ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ಆಯೋಜಿಸಲು ನಿರ್ಧರಿಸಲಾಗಿದ್ದು, ಅಗತ್ಯ ಸಿದ್ಧತೆ ಕೈಗೊಳ್ಳುವಂತೆ ಅಪರ ಡಾ.ಔದ್ರಾಮ ಅವರು ತಿಳಿಸಿದರು.

ಡಾ. ರಾಜ್ ಕುಮಾರ ಅವರು, ಕನ್ನಡದ ಮೇರು ನಟ, ನಟಸಾರ್ವಭೌಮರಾಗಿ ಈ ನಾಡು ಕಂಡ ನೆಚ್ಚಿನ ನಟರಾಗಿದ್ದಾರೆ. ಕನ್ನಡಪರ ಹೋರಾಟಗಳಲ್ಲಿ ಭಾಗಿಯಾಗಿ ನಾಡು-ನುಡಿಗಾಗಿ ಮಹತ್ತರ ಸೇವೆ ಸಲ್ಲಿಸಿದ್ದಾರೆ. ಇವರ ಜನ್ಮ ದಿನವನ್ನು ಅರ್ಥಪೂರ್ಣವಾಗಿ ಆಚರಿಸಬೇಕು ಎಂದರು.

ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ, ವಿವಿಧ ಕನ್ನಡ ಪರ ಸಂಘಟನೆಗಳ ಮುಖಂಡರು ಸಲಹೆ ನೀಡಿದಂತೆ ಈ ಕಾರ್ಯಕ್ರಮದಲ್ಲಿ ಡಾ.ರಾಜಕುಮಾರ್ ಅವರ ಚಲನಚಿತ್ರ ಗೀತೆಗಳನ್ನು ಹಾಡಲು ಆಸಕ್ತ ಕಲಾವಿದರು ಮತ್ತು ಎಲ್ಲ ಸಾರ್ವಜನಿಕರಿಗೆ ಅವಕಾಶ ಕಲ್ಪಿಸಬೇಕು. ವಯಸ್ಸಿನ ಮಿತಿ ವಿಧಿಸದೇ,ಕಾರ್ಯಕ್ರಮದ ನಿಗದಿತ ಸಮಯ ಮೀರದಂತೆ ಕಾರ್ಯಕ್ರಮದ ಯಶಸ್ಸಿಗೆ ಎಲ್ಲರಿಗೂ ಅವಕಾಶ ನೀಡಬೇಕು ಎಂದರು.



ಸಭೆಯಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪ ನಿರ್ದೇಶಕ ವೀರಯ್ಯ ಸಾಲಿಮಠ, ಮಹಾನಗರ ಪಾಲಿಕೆಯ ಉಪ ಆಯುಕ್ತ ಮಹಾವೀರ ಬೋರಣ್ಣವರ, ಸಹಾಯಕ ತೋಟಗಾರಿಕಾ ನಿರ್ದೇಶಕ ಭಗವಂತ ಜಿಗಜಿಣಗಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಂತೋಷ ಭೋವಿ, ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ರಾಜಶೇಖರ ಧೈವಾಡಿ ಎಂ.ಸಿ ಮುಲ್ಲಾ, ಅಡಿವೆಪ್ಪ ಸಾಲಗಲ್, ಸುರೇಶ ಬಿಜಾಪುರ, ಫಯಾಜ್ ಕಲಾದಗಿ, ಶರಣು ಸಬರದ, ಮಂಜುಳಾ ಅಂಗಡಿ, ಸುರೇಶ್ ಬಬಲೇಶ್ವರ, ಸೋಮನಗೌಡ ಕಲ್ಲೂರ, ಭೀಮರಾಯ ಜಿಗಜಿಣಗಿ ಸೇರಿದಂತೆ ವಾರ್ತಾ ಇಲಾಖೆಯ ಸಿಬ್ಬಂದಿ ಉಪಸ್ಥಿತರಿದ್ದರು.

### ಡಾ.ರಾಜ್ ಅಭಿನಯದ ಸಿನಿಮಾ ಗೀತೆಗಳ ಗಾಯನಕ್ಕೆ ಅವಕಾಶ

ವಿಜಯಪುರ: ವರನಟ ಡಾ.ರಾಜಕುಮಾರ್ ಜನ್ಮದಿನಾಚರಣೆಯ ಕಾರ್ಯಕ್ರಮದಲ್ಲಿ ಡಾ.ರಾಜಕುಮಾರ್ ಅವರ ಚಲನಚಿತ್ರ ಗೀತೆಗಳ ಪ್ರಸ್ತುತಪಡಿಸಲು ಆಸಕ್ತ ಸಾರ್ವಜನಿಕರಿಗೆ ವಿಶೇಷ ಅವಕಾಶ ಕಲ್ಪಿಸಲಾಗಿದೆ.

ವಯಸ್ಸಿನ ಮಿತಿ ಇರುವುದಿಲ್ಲ. ಪ್ರಸ್ತುತಿಯ ಸಮಯದ ಮಿತಿ ಇದೆ. ಒಬ್ಬರಿಗೆ ಒಂದು ಹಾಡಿಗೆ ಮಾತ್ರ ಅವಕಾಶವಿದ್ದು, ಆಯೋಜಕರ ನಿರ್ಣಯವೇ ಅಂತಿಮವಾಗಿದ್ದು, ತಮ್ಮ ಹೆಸರು ಮತ್ತು ಪೂರ್ಣ ವಿಳಾಸದೊಂದಿಗೆ ಇದೇ ಏಪ್ರೀಲ್ 22ರೊಳಗಾಗಿ ನೋಂದಾಯಿಸಿಕೊಳ್ಳಬಹುದಾಗಿದೆ. ನೋಂದಣಿ ಕಡ್ಡಾಯವಾಗಿದೆ.

ಕಾರ್ಯಕ್ರಮಕ್ಕೆ ಹೆಸರು ನೋಂದಾಯಿಸುವ ಹಾಡುಗಾರರು, ಕಲಾವಿದರು, ಸಾರ್ವಜನಿಕರು ಸ್ವಂತ ಖರ್ಚಿನಲ್ಲೇ ಕಾರ್ಯಕ್ರಮಕ್ಕೆ ಬರತಕ್ಕದ್ದು. ಕಾರ್ಯಕ್ರಮದಲ್ಲಿ ಪ್ರಮಾಣ ಪತ್ರವನ್ನು ಮಾತ್ರ ಗೌರವವಾಗಿ ವಿತರಿಸಲಾಗುವುದು. ಆಸಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಚೇರಿಯನ್ನು ಅಥವಾ ಮೊಬೈಲ್ ಸಂಖ್ಯೆ 9049499783 ಸಂಪರ್ಕಿಸಿ ಹೆಸರು ನೋಂದಾಯಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## ನಮ್ಮ ನಿಸ್ವಾರ್ಥ ಸತ್ಕಾರ್ಯಗಳು ನಮ್ಮನ್ನು ಕಾಪಾಡುತ್ತವೆ : ಡಾ.ಗೀತಾ



■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ನಾವು ಮಾಡಿದ ನಿಷ್ಠೆ, ಪ್ರಾಮಾಣಿಕತೆ, ನಿಸ್ವಾರ್ಥ ಸತ್ಕಾರ್ಯಗಳು ಆಪತ್ಕಾಲದಲ್ಲಿ ನಮ್ಮನ್ನು ಕಾಪಾಡುತ್ತವೆ ಎಂದು ಇಂಗ್ಲೆಂಡಿನ ಎಡಿನ್ಬರ್ಗ್ ವಿಶ್ವವಿದ್ಯಾಲಯದ ವೈದ್ಯೆ ಡಾ. ಗೀತಾ ಶೆಟ್ಟಿ ಹೇಳಿದ್ದಾರೆ.

ನಗರದ ಬಿ.ಎಲ್.ಡಿ.ಇ ಆಸ್ಪತ್ರೆಯಲ್ಲಿ ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದ ಶ್ರೀ ಬಿ. ಎಂ. ಪಾಟೀಲ ವೈದ್ಯಕೀಯ ಮಹಾವಿದ್ಯಾಲಯದ ಶಸ್ತ್ರ ಚಿಕಿತ್ಸೆ ವಿಭಾಗದ ವತಿಯಿಂದ ಆಯೋಜಿಸಲಾದ ಕ್ಯಾನ್ಸರ್ ನೊಂದಿಗೆ ಹೋರಾಟ ಕುರಿತು ಅವರು ಅತಿಥಿ ಉಪನ್ಯಾಸ ನೀಡಿದ ಅವರು ಭಾರತೀಯ ವೈದ್ಯಕೀಯ ಚಿಕಿತ್ಸೆ ವಿಶ್ವದಲ್ಲೇ ಶ್ರೇಷ್ಠವಾಗಿದೆ ಎಂದು ಅವರು ಹೇಳಿದರು.

ಶಸ್ತ್ರ ಚಿಕಿತ್ಸೆ ವಿಭಾಗದ ಮುಖ್ಯಸ್ಥ ಡಾ. ಮಂಜುನಾಥ ಕೋಟೆಣ್ಣವರ ಪ್ರಾಸ್ತಾವಿಕವಾಗಿ ಮಾತನಾಡಿ, ಡಾ. ಗೀತಾ ಶೆಟ್ಟಿ ಅವರು ತಾವು ಓದಿರುವ ಕಾಲೇಜಿನ ಹಿರಿಯ ವಿದ್ಯಾರ್ಥಿಯಾಗಿದ್ದು, ಹಿಂದೆಯೂ ಮತ್ತು ಮುಂದೆಯೂ ಎಂದೆಂದಿಗೂ ನಮಗೆ ಮಾದರಿಯಾಗಿದ್ದಾರೆ" ಎಂದು ಹೇಳಿದರು.

ಪ್ರಾಧ್ಯಾಪಕಿ ಡಾ.ವಿಜಯಾ.ಪಾಟೀಲ ಮಾತನಾಡಿ, ಡಾ. ಗೀತಾ ಶೆಟ್ಟಿ ಅವರು ಮಾದರಿ ವೈದ್ಯ ಮತ್ತು ಮಾದರಿ ರೋಗಿಯೂ ಆಗಿದ್ದಾರೆ. ಅವರ ಧೈರ್ಯ, ಇಚ್ಛಾಶಕ್ತಿ ಮತ್ತು ಸೇವಾ ಉತ್ಸುಕತೆಗಳು ಮೆಚ್ಚುವಂಥವು ಎಂದರು.

ಬಿ.ಎಲ್.ಡಿ.ಇ ಮೆಡಿಕಲ್ ಕಾಲೇಜಿನ ವೈಜ್ಞಾನಿಕ ಶೈಕ್ಷಣಿಕ ಮತ್ತು ಸಂಶೋಧನೆ ಸಮಿತಿ(ಖಂಖಖ) ಹಾಗೂ ವಿಜಯಪುರ ಜಿಲ್ಲಾ ಶಸ್ತ್ರ ಚಿಕಿತ್ಸಕರ ಸಂಘದ ಸಹಯೋಗದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್ ಡಾ. ತೇಜಸ್ವಿನಿ ವಲ್ಲಭ, ಹಿರಿಯ ಉಪ ಪ್ರಾಚಾರ್ಯ ಡಾ. ವಿಜಯಕುಮಾರ ಟಿ. ಕಲ್ಯಾಣಪ್ಪಗೋಳ, ವೈದ್ಯಕೀಯ ಅಧೀಕ್ಷಕ ಡಾ. ಸಂಜೀವ ಬೆಂಟೂರ, ಆರ್ ಆ್ಯಂಡ್ ಡಿ ವಿಭಾಗದ ಡೀನ್ ಡಾ. ಎಂ. ಎಂ. ಪಾಟೀಲ, ಎಸ್. ಎ. ಆರ್. ಎಸ್ ಚೇರಮನ್ ಡಾ.ಲತಾದೇವಿ ಎಚ್. ಟಿ, ಜಿಲ್ಲಾ ಶಸ್ತ್ರ ಚಿಕಿತ್ಸಕರ ಸಂಘದ ಕಾರ್ಯದರ್ಶಿ ಡಾ. ರಮಾಕಾಂತ ಬಳೂರಕರ

ಜಿಲ್ಲಾಸ್ಪತ್ರೆಯ ಹಿರಿಯ ಶಸ್ತ್ರ ಚಿಕಿತ್ಸಕ ಡಾ.ಆನಂದ ಝುಳಕಿ, ಡಾ. ವಿಜಯ.ಕಟ್ಟಿ, ಡಾ. ಗಿರೀಶ ಕುಲ್ಲೊಳ್ಳಿ, ಡಾ. ವಿಕ್ರಂ ಸಿಂದಗಿಕರ, ಡಾ. ದೀಪಕ ಚವ್ಹಾಣ, ಸ್ನಾತಕ ಹಾಗೂ ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಬಿರುಬಿಸಿಲಿನ ತಾಪಮಾನಕ್ಕೆ ನಲುಗಿದ ಜನತೆ : ಹೆಚ್ಚಿದ ಧಗೆ

**41 ಡಿಗ್ರಿ ಸೆಲ್ಸಿಯಸ್ ದಾಟಿದ ಉಷ್ಣಾಂಶ | ನದಿಯಲ್ಲಿ ಈಜಿನ ಮೊರೆಹೋದ ಯುವಕರು | ಕಾದು ಕೆಂಡದಂತಾಗುವ ಭೂಮಿ**

■ ಉದಯರಶ್ಮಿ ದಿನಪತ್ರಿಕೆ

■ ವರದಿ: ಸಿದ್ರಾಮ್ ಎಮ್ ಇಟ್ಟಿ





ಜಮಖಂಡಿ:ದಿನದಿಂದದಿನಕ್ಕೆಬಿಸಿಲಿನ ಧಗೆ ಹೆಚ್ಚುತ್ತಿದೆ. ಅಧಿಕ ತಾಪಮಾನದಿಂದ ಭೂಮಿ ಕಾದು ಕೆಂಡದಂತಾಗಿದೆ. ಇದರಿಂದ ಸಾರ್ವಜನಿಕರು, ರೈತರು ತತ್ತರಿಸಿ ಹೋಗಿದ್ದಾರೆ. ಬಿಸಿಲಾಘಾತ ತಡೆದುಳ್ಳಲು ಗ್ರಾಮೀಣ ಪ್ರದೇಶದ ಯುವಕರು ತಮ್ಮೂರಿನ ನದಿಯಲ್ಲಿ ಈಜಿನ ಮೊರೆ ಹೋಗಿದ್ದಾರೆ.

ಮಳೆಗಾಲದಲ್ಲಿ ಮಳೆ ಸುರಿದು ಭೂತಾಯಿ ಒಡಲು ತಂಪಾಗಿರುತ್ತೆ. ಕೃಷಿ ಚಟುವಟಿಕೆಗಳು ಗರಿಗೆದರುತ್ತವೆ. ಆದರೆ ಬಿರು ಬೇಸಿಗೆಯಲ್ಲಿ ವರುಣನ ದರ್ಶನವಿಲ್ಲದ ಕಾರಣ ಉರಿವ ಸೂರ್ಯನ ತಾಪ ತಡೆದುಕೊಳ್ಳುವುದು ಕಷ್ಟವಾಗಿದೆ. ಎಲ್ಲೇ ಕುಂತರು-ನಿಂತರೂ ಮನಸ್ಸಿಗೆ ನೆಮ್ಮದಿ ಇಲ್ಲದಾಗಿದೆ. ತಂಪಾದ ನೆರಳಿಗಾಗಿ ಹಂಬಲಿಸುವಂತಾಗಿದೆ.

ತಾಲೂಕಿನ ಚಿಕ್ಕಪಡಸಲಗಿ ಗ್ರಾಮದ ಶ್ರಮಬಿಂದು ಸಾಗರದ ಕೃಷ್ಣಾ ನದಿ ಪಾತ್ರದ, ತಾಪಮಾನ ಏರಿಕೆಯಿಂದ ನಲುಗಿರುವ ಜನ ಈಜಿನ ಮೊರೆ ಹೋಗಿದ್ದಾರೆ. ಈ ನದಿಯಲ್ಲಿ ನಿತ್ಯ ಬೇರೆ ಬೇರೆ ಗ್ರಾಮಗಳ ನೂರಾರು ಯುವಕರು ಈಜಲು ಬರುತ್ತಾರೆ. ಆಲಗೂರ, ಹಿರೇಪಡಸಲಗಿ, ನಾಗನೂರ, ಕವಟಗಿ, ಜನವಾಡ, ಬಿದರಿ ಸೇರಿ ಸುತ್ತಲಿನ ಗ್ರಾಮಗಳ ಯುವಕರು ಇಲ್ಲಿ ಈಜಾಡುತ್ತಾರೆ. ರೈತರು ತಮ್ಮ ತೋಟದಲ್ಲಿರುವ ನೀರಿನ, ಹೊಂಡಗಳಲ್ಲಿ ಈಜಿ ಬಿಸಿಲಿನ ತಾಪ ತಡೆದುಕೊಳ್ಳುತ್ತಿದ್ದಾರೆ.

"ತಾಪಮಾನ ಏರಿಕೆಯಿಂದ ಯುವಕರು ತತ್ತರಿಸಿದ್ದಾರೆ. ಇದರಿಂದ ತಪ್ಪಿಸಿಕೊಳ್ಳಲು ನದಿ ಕೆರೆ, ಹೊಂಡಗಳಲ್ಲಿ ಈಜಲು ಮುಂದಾಗಿದ್ದಾರೆ. ನಮ್ಮ ಚಿಕ್ಕಪಡಸಲಗಿ ಗ್ರಾಮದ ಶ್ರಮಬಿಂದು ಸಾಗರದ ನದಿ ಪಾತ್ರದಲ್ಲಿ ಇನ್ನಷ್ಟು ಇನ್ನೆರಡು ವಾರಗಳ ಮಟ್ಟಿಗೆ ಆಗುವಷ್ಟು ನೀರಿದ್ದು, ಅದರಲ್ಲಿ ಈಜಾಡಲು ಅನುಕೂಲವಾಗಿದೆ."
■ ಸುರೇಶ ಸಂತಿ
ಶಿಕ್ಷಕರು, ಶಿವಶರಣ ಹರಳಯ್ಯ ಸ್ಮಾರಕ ಪ್ರಾಥಮಿಕ ಶಾಲೆ ಚಿಕ್ಕಪಡಸಲಗಿ.


### ಆರೋಗ್ಯ ಕಾಳಜಿ ವಹಿಸಲಿ

"ಅಧಿಕ ಉಷ್ಣಾಂಶದಿಂದ ಜನರಲ್ಲಿ ಆರೋಗ್ಯ ಸಮಸ್ಯೆ ಕಾಡುತ್ತಿವೆ. ತಲೆನೋವು, ಹೊಟ್ಟೆ ನೋವು, ಜ್ವರ, ಸುಸ್ತು ಹೆಚ್ಚುತ್ತಿದೆ. ಆರೋಗ್ಯದಿಂದ ಇರಲು ಉತ್ತಮ ಆಹಾರ, ಹೆಚ್ಚು ನೀರು ಕುಡಿಯುವುದು, ವಿಶ್ರಾಂತಿ, ಎಳನೀರು ಜತೆಗೆ ಹಣ್ಣು ಹಂಪಲು ಸೇವನೆ ಒಳ್ಳೆಯದು. ಮಕ್ಕಳನ್ನು ಪಾಲಕರು ಬಿಸಿಲಿಗೆ ಬಿಡದಂತೆ ಕಾಳಜಿ ವಹಿಸಬೇಕು. ಆರೋಗ್ಯದಲ್ಲಿ ಏನಾದರೂ ತೊಂದರೆ ಕಂಡು ಬಂದರೆ ಹತ್ತಿರದ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಪಡೆಯಬೇಕು."
■ ಮುಕುಂದ ಕಾಂಬಳೆ
ಮುಖ್ಯ ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ, ಚಿಕ್ಕಲಕಿ ಕ್ರಾಸ್.

### ತಂಪು ಪಾನೀಯಕ್ಕೆ ಬೇಡಿಕೆ

ಬಿಸಿಲಿನ ತಾಪಮಾನ 40 ರಿಂದ 41ಕ್ಕೆ ಡಿಗ್ರಿ ಸೆಲ್ಸಿಯಸ್ ದಾಟಿದೆ. ಹೊಟ್ಟೆ ತಂಪಾಗಿಸಿಕೊಳ್ಳಲು ಜನತೆ ತಂಪು ಪಾನೀಯ ಮೊರೆ ಹೋಗಿದ್ದಾರೆ. ಹೀಗಾಗಿ ಹಣ್ಣು ಹಂಪಲು, ಜ್ಯೂಸ್, ಎಳನೀರಿಗೆ ಇನ್ನಿಲ್ಲದ ಬೇಡಿಕೆ ಬಂದಿದೆ. ಎಳನೀರು ಒಂದಕ್ಕೆ 45 ರೂ. ಇದೆ. ಹಣ್ಣುಗಳ ಬೆಲೆಯೂ ಗಗನಕ್ಕೇರಿದೆ.

# ವಚನ ಸಾಹಿತ್ಯದ ಭಾಸ್ಕರ ಬಸವೇಶ್ವರರು




**ನಾಳೆ (ಏಪ್ರಿಲ್ 20 ಸೋಮವಾರ) ವಿಶ್ವಗುರು, ಮಹಾ ಮಾನವತಾವಾದಿ ಬಸವಣ್ಣನವರ ಜಯಂತಿ ಪ್ರಯುಕ್ತ ಈ ವಿಶೇಷ ಲೇಖನ**

■ ಉದಯರಶ್ಮಿ ದಿನಪತ್ರಿಕೆ

ಬಸವಣ್ಣನವರ ವಚನಗಳು ಕೇವಲ ಸಾಹಿತ್ಯವಲ್ಲ, ಅವು ಬದುಕನ್ನು ತಿದ್ದುವ ದಿವ್ಯ ಮಂತ್ರಗಳು.

12ನೇ ಶತಮಾನದ ಸಾಮಾಜಿಕ ಕ್ರಾಂತಿಯ ಹರಿಕಾರರಾದ ಬಸವಣ್ಣನವರು ಕನ್ನಡ ಸಾಹಿತ್ಯಕ್ಕೆ ನೀಡಿದ 'ವಚನ'ಗಳ ಮಹತ್ವವನ್ನು ಈ ಕೆಳಗಿನ ಲೇಖನದಲ್ಲಿ ವಿವರಿಸಲಾಗಿದೆ.

ಬಸವೇಶ್ವರ ವಚನಗಳ ಮಹತ್ವ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ 12ನೇ ಶತಮಾನವನ್ನು 'ವಚನ ಕ್ರಾಂತಿಯ ಯುಗ' ಎಂದು ಕರೆಯಲಾಗುತ್ತದೆ. ಸಾಮಾನ್ಯ ಜನರಿಗೂ ಅರ್ಥವಾಗುವ ಸರಳ ಭಾಷೆಯಲ್ಲಿ ಉನ್ನತ ಜೀವನದರ್ಶನವನ್ನು ನೀಡಿದವರು ಬಸವಣ್ಣನವರು. ಅವರ ವಚನಗಳು ಇಂದಿಗೂ ಸಮಾಜಕ್ಕೆ ದಾರಿದೀಪವಾಗಿವೆ. ಬಹುಷಃ






ಮಾನವರಾದ ನಾವು ವಚನಗಳು ಮತ್ತು ಅವುಗಳ ಅರ್ಥಗಳನ್ನು ಚನ್ನಾಗಿ ತಿಳಿದುಕೊಂಡರೆ ಯಾವ ನ್ಯಾಯಾಲಯವು ಇರುತ್ತಿರಲಿಲ್ಲ ಅನಿಸುತ್ತದೆ.

ಸರಳ ಭಾಷೆಯಲ್ಲಿ ಮೂಡಿವೆ

ಅಂದಿನ ಕಾಲದಲ್ಲಿ ಧಾರ್ಮಿಕ ಮತ್ತು ತಾತ್ವಿಕ ಜ್ಞಾನವು ಸಂಸ್ಕೃತ ಭಾಷೆಗೆ ಸೀಮಿತವಾಗಿತ್ತು. ಬಸವಣ್ಣನವರು ಈ ಜ್ಞಾನವನ್ನು ಪಂಡಿತರ ಮಠದಿಂದ ಸಾಮಾನ್ಯ ಜನರ ಅಂಗಳಕ್ಕೆ ತಂದರು. ಆಡುಭಾಷೆಯಾದ ಕನ್ನಡದಲ್ಲಿ ವಚನಗಳನ್ನು ರಚಿಸುವ ಮೂಲಕ, ಪ್ರತಿಯೊಬ್ಬರಿಗೂ ತತ್ವಜ್ಞಾನ ಸುಲಭವಾಗಿ ತಲುಪುವಂತೆ ಮಾಡಿದರು.

ಸಾಮಾಜಿಕ ಸಮಾನತೆಯ ಸಂದೇಶ

ಬಸವಣ್ಣನವರ ವಚನಗಳ ಅತ್ಯಂತ ದೊಡ್ಡ ಮಹತ್ವವೆಂದರೆ ಅವು ಸಾರುವ ಸಾಮಾಜಿಕ ಸಮಾನತೆ. "ಇವನಾರವ ಇವನಾರವ ಎಂದೆನಿಸದಿರಯ್ಯ, ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯ" ಎಂಬ ವಚನದ ಸಾಲುಗಳು ಜಾತಿ-ಮತಗಳ ಭೇದವಿಲ್ಲದ ವಿಶ್ವಮಾನವ ಸಂದೇಶವನ್ನು ನೀಡುತ್ತವೆ. ಅಸ್ಪೃಶ್ಯತೆ ಮತ್ತು ಮೇಲು-ಕೀಳು ಭಾವನೆಯನ್ನು ಹೋಗಲಾಡಿಸಲು ಇವು ಅಸ್ತ್ರಗಳಾಗಿ ಬಳಕೆಯಾದವು.

ಕಾಯಕ ಮತ್ತು ದಾಸೋಹ ಸಿದ್ಧಾಂತ

"ಕಾಯಕವೇ ಕೈಲಾಸ" ಎಂಬ ತತ್ವ ಬಸವಣ್ಣನವರ ಅನೇಕ ವಚನಗಳಲ್ಲಿ ಪ್ರತಿಧ್ವನಿಸುತ್ತದೆ. ಯಾವುದೇ ಕೆಲಸವಾದರೂ ಅದನ್ನು ನಿಷ್ಠೆಯಿಂದ ಮಾಡುವುದು ದೈವತ್ವಕ್ಕೆ ಸಮಾನ ಎಂಬ ಗೌರವವನ್ನು ಶ್ರಮಜೀವಿಗಳಿಗೆ ತಂದುಕೊಟ್ಟರು. ಸಮಾಜದಿಂದ ಪಡೆದಿದ್ದನ್ನು ಸಮಾಜಕ್ಕೆ ಮರಳಿಸುವ 'ದಾಸೋಹ' ಭಾವನೆಯು ಆರ್ಥಿಕ ಸಮಾನತೆಯ ದಾರಿಯನ್ನು ತೋರಿಸಿಕೊಟ್ಟಿತು.

ನೈತಿಕ ಮತ್ತು ಸದಾಚಾರದ ಬೋಧನೆ

ಬಸವಣ್ಣನವರು ಮನುಷ್ಯನ ಅಂತರಂಗ ಮತ್ತು ಬಹಿರಂಗ ಶುದ್ಧಿಗೆ ಹೆಚ್ಚಿನ ಒತ್ತು ನೀಡಿದರು.

> "ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ..."ಇದಿರು ಹಳಿಯಲು ಬೇಡ ತನ್ನ ಬಣ್ಣಿಸಬೇಡ ಇದೆ ಅಂತರಂಗ ಶುದ್ಧಿ ಇದೆ ಬಹಿರಂಗ ಶುದ್ಧಿ ಇದೆ ನಮ್ಮ ಕೂಡಲ ಸಂಗಮದೇವರನೊಲಿಸುವ ಪರಿ

ಈ ಏಳು ಸಾಲುಗಳ ವಚನವೊಂದೇ ಸಾಕು ಮನುಷ್ಯನು ಉತ್ತಮ ನಾಗರಿಕನಾಗಿ ಬದುಕಲು. ಸಪ್ತಶೀಲಗಳೆಂದು ಕರೆಯಲ್ಪಡುವ ಈ ತತ್ವಗಳು ವ್ಯಕ್ತಿತ್ವ ವಿಕಸನಕ್ಕೆ ಅಡಿಪಾಯವಾಗಿವೆ.

ಲಿಂಗ ಸಮಾನತೆ ವಚನ ಚಳವಳಿ

ಲಿಂಗ ಸಮಾನತೆ

ವಚನ ಚಳವಳಿಯು ಮಹಿಳೆಯರಿಗೆ ಸಮಾನ ಸ್ಥಾನಮಾನ ನೀಡಿತು. ಬಸವಣ್ಣನವರು ಸ್ತ್ರೀ-ಪುರುಷರಲ್ಲಿ ಆತ್ಮ ಒಂದೇ ಎಂಬ ಸತ್ಯವನ್ನು ಸಾರಿದರು. ಇದರಿಂದಾಗಿ ಅಕ್ಕಮಹಾದೇವಿ, ನೀಲಾಂಬಿಕೆ ಮುಂತಾದ ಅನೇಕ ಸ್ತ್ರೀ ವಚನಕಾರ್ತಿಯರು ಸಮಾಜದ ಮುಂಚೂಣಿಗೆ ಬರಲು ಸಾಧ್ಯವಾಯಿತು.

ಇಂದು ಮಹಿಳಾ ಸಮಾನತೆ ಬಂದಿದೆ ಎಂದರೆ ಇದಕ್ಕೆ ಕಾರಣ ಬಸವಣ್ಣ

ವೈಚಾರಿಕತೆ ಮತ್ತು ಮೂಢನಂಬಿಕೆ ವಿರೋಧ

ಮೂಢನಂಬಿಕೆಗಳು, ಪ್ರಾಣಿಬಲಿ ಮತ್ತು ಅರ್ಥಹೀನ ಆಚರಣೆಗಳನ್ನು ಬಸವಣ್ಣನವರು ತೀವ್ರವಾಗಿ ವಿರೋಧಿಸಿದರು. "ದೇಹವೇ ದೇಗುಲ" ಎಂದು ಹೇಳುವ ಮೂಲಕ ದೇವರಿಗಾಗಿ ಎಲ್ಲೋ ಹುಡುಕುವ



ಬದಲು ನಮ್ಮೊಳಗೆ ದೈವತ್ವವನ್ನು ಕಾಣುವ ವೈಜ್ಞಾನಿಕ ಮನೋಭಾವವನ್ನು ಬೆಳೆಸಿದರು.

ಮಾನವತೆಗಿಂತ ಮಿಗಿಲಾದ ಪೂಜೆ ಮತ್ತೊಂದಿಲ್ಲ ಎಂದು ಸಾರಿದರು

ಬಸವಣ್ಣನವರ ವಚನಗಳು ಕೇವಲ ಬೋಧನೆಗಳಲ್ಲ, ಅವುಗಳು ಸುಸಂಸ್ಕೃತ ಸಮಾಜದ ಸಂವಿಧಾನದಂತಿವೆ. ಕೂಡಲಸಂಗಮದೇವನ ಅಂಕಿತದಲ್ಲಿ ಮೂಡಿಬಂದ ಈ ವಚನಗಳು ಕಾಲಾತೀತವಾಗಿದ್ದು, ಇಂದಿನ ಅಶಾಂತಿಯ ಜಗತ್ತಿಗೆ ಶಾಂತಿ ಮತ್ತು ಪ್ರೀತಿಯ ಮಾರ್ಗವನ್ನು ತೋರಿಸುತ್ತಿವೆ. ವಚನಗಳ ಪಾಲನೆಯೇ ನಾವು ಬಸವಣ್ಣನವರಿಗೆ ಸಲ್ಲಿಸುವ ಅತಿದೊಡ್ಡ ಗೌರವ ವಚನಗಳನ್ನು ಓದುವುದಷ್ಟೇ ಅಲ್ಲ, ನಿಜವಾಗಿ ಅವುಗಳಿಗೆ ಗೌರವವನ್ನು ತಂದುಕೊಡಬೇಕಾದರೆ ನಮ್ಮಂತೆ ಪರರ ಬಗೆವುದೇ ಕೈಲಾಸ ಎಂಬ ಮಾತನ್ನು ಅಕ್ಷರ ಸಹ ನಾವು ಮನಗಂಡಾಗ ಮಾತ್ರ ವಚನ ಸಾಹಿತ್ಯಕ್ಕೊಂದು ನಿಜವಾದ ಅರ್ಥ ಬರುತ್ತದೆ ಅಲ್ಲದೆ ವಚನಗಳು ತನ್ನದೇ ಆದಂತಹ ಸಾರ್ಥಕ ಸತ್ಯವನ್ನು ಮರೆಯುತ್ತವೆ ಇದರಿಂದ ಅಂಧಕಾರ ಅಜ್ಞಾನ ಮರೆಯಾಗುತ್ತದೆ.

ಲೇಖನ.
- ಶಿಲ್ಪಾ ಮೃತ್ಯುಂಜಯ ಮಿಣಜಿಗಿ
ಶಿಕ್ಷಕರು, ಕೆ. ಇ. ಬೋರ್ಡ್ ಸೆಂಟ್ರಲ್ ಸ್ಕೂಲ.
ಧಾರವಾಡ



## ಸಂಗೀತದಿಂದ ಮನಸ್ಸಿಗೆ ನೆಮ್ಮದಿ: ರೂಪಾ ಪಾಟೀಲ್




ಬೀದರ್: ಸಂಗೀತದಿಂದ ಮನಸ್ಸಿಗೆ ನೆಮ್ಮದಿ ಸಿಗಲಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ ಮಹಿಳಾ ಘಟಕದ ಅಧ್ಯಕ್ಷೆ ಶ್ರೀಮತಿ ರೂಪಾ ಪಾಟೀಲ್ ಅವರು ಹೇಳಿದರು.

ಶ್ರೀ ಸ್ವರ ಸಿದ್ಧಿ ಸಾಂಸ್ಕೃತಿಕ ಕಲಾಸಂಸ್ಥೆಯ ವತಿಯಿಂದ ಗುರುವಾರ ನಗರದ ಸಂಗೀತ ಶಾಲೆಯಲ್ಲಿ ಶಾಸ್ತ್ರೀಯ ಸಂಗೀತ ಕಾರ್ಯಕ್ರಮವನ್ನು ಸರಸ್ವತಿ ಪೂಜೆಯೊಂದಿಗೆ ಚಾಲನೆ ನೀಡಿ ಮಾತನಾಡಿದ ಅವರು, ಸಂಗೀತವು ಎಲ್ಲರ ಮನಸ್ಸು ಮತ್ತು ಹೃದಯವನ್ನು ಪ್ರಫುಲ್ಲಗೊಳಿಸುತ್ತದೆ. ನಮ್ಮ ಭಾರತೀಯ ಸಂಸ್ಕೃತಿಯನ್ನು ಜನರಿಗೆ ಸುಂದರವಾಗಿ ಪರಿಚಯಿಸಲು ಇಂತಹ ಕಾರ್ಯಕ್ರಮಗಳು ಅತ್ಯಂತ ಸೂಕ್ತ. ಸಂಗೀತದ ನಿಜವಾದ ಆಳ ಮತ್ತು ಸೌಂದರ್ಯವನ್ನು ಜನರಿಗೆ ತಿಳಿಸಲು ಆಗಾಗ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸುವುದು ಅಗತ್ಯ ಎಂದರು.

ಮುಖ್ಯ ಅತಿಥಿಯಾಗಿದ್ದ ಸ್ವರ ಸಿದ್ಧಿ ಸಾಂಸ್ಕೃತಿಕ ಕಲಾಸಂಸ್ಥೆಯ ಕಾರ್ಯದರ್ಶಿ ಹಾಗೂ ಪ್ರಸಿದ್ಧ ಗಾಯಕ ಜಗನ್ನಾಥ್ ನಾನಕೇರ್ ಅವರು ಮಾತನಾಡಿ, ಇಂತಹ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಗೀತಾಸಕ್ತರು ಹೆಚ್ಚಿನ ಬೆಂಬಲ ನೀಡಬೇಕು ಎಂದು ಕರೆ ನೀಡಿದರು. ಇನ್ನೋರ್ವ ಮುಖ್ಯ ಅತಿಥಿ ಸಂಗಯ್ಯ ಸ್ವಾಮಿ ಡೊಂಗರಗಿ ಅವರು ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ನಡೆಸಿಕೊಡುತ್ತಾ ರಾಗ, ತಾಳ, ಲಯಗಳ ಕುರಿತು ವಿವರವಾಗಿ ತಿಳಿಸಿದರು. ಅವರ ಗಾಯನದಿಂದ ಸಂಗೀತ ಶಾಲೆಯ ವಾತಾವರಣವೇ ಶಾಸ್ತ್ರೀಯ ಸಂಗೀತ ಲಹರಿಯಲ್ಲಿ ಮಿಂದೇಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಅಧ್ಯಕ್ಷ ಸಿದ್ದು ಸಾಯಿ ನಾನಕೇರ ಅವರು ಮಾತನಾಡಿ, ಭಾರತ ದೇಶ ಶಾಸ್ತ್ರೀಯ ಸಂಗೀತದ ತಳಹದಿ. ಈ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುತ್ತಿರುವುದು ಶ್ಲಾಘನೀಯ ಎಂದು ಹೇಳಿದರು. ಈ ಸಂದರ್ಭದಲ್ಲಿ ಜಗನ್ನಾಥ್ ನಾನಕೇರ ಅವರು ಹಾರ್ಮೋನಿಯಂ ವಾದನ ಮಾಡಿದರು. ಸಂಗಯ್ಯ ಸ್ವಾಮಿ ಡೊಂಗರಗಿ ಅವರು ಶಾಸ್ತ್ರೀಯ ಗಾಯನ ನಡೆಸಿಕೊಟ್ಟರು. ಸಂಸ್ಥೆಯ ಅಧ್ಯಕ್ಷ ಸಿದ್ದು ಸಾಯಿ ಸ್ವಾಗತಿಸಿದರು. ಎಸ್. ದತ್ತಾತ್ರೇಯ ಕಾರ್ಯಕ್ರಮ ನಿರೂಪಿಸಿದರು. ರಾಜು ವಿಶ್ವಕರ್ಮ ಹಾಗೂ ಮಾರ್ವಿನ್ ತಬಲಾ ಸಾಥ್ ನೀಡಿದರು. ಕೇದಾರ ನಾನಕೇರಾ ಅವರು ವಂದಿಸಿದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಪದಾಧಿಕಾರಿಗಳು, ಸಂಧ್ಯಾ ಶೆಟಕಾರ್, ಪುಷ್ಪ ತಗಾರೆ, ಚಂದ್ರಶೇಖರ್ ಆರ್, ಸ್ವರ ಸಿದ್ಧಿ ಸಂಗೀತ ಶಾಲೆಯ ಹಲವಾರು ಮಕ್ಕಳು ಹಾಗೂ ಅವರ ಪೋಷಕರು ಭಾಗವಹಿಸಿದ್ದರು.

## ಬೀದರ್‌ನಲ್ಲಿ ಏಪ್ರಿಲ್ 21ಕ್ಕೆ ಚನ್ನಬಸವ ಪಟ್ಟದ್ದೇವರ 27ನೇ ಸ್ಮರಣೋತ್ಸವ

# ಡಾ. ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ

ಬೀದರ್: ಈ ತಿಂಗಳ 20ರಂದು ಭಾಲ್ಕಿ ನಗರದ ಚನ್ನಬಸವಾಶ್ರಮದಲ್ಲಿ ವಿಶ್ವಗುರು ಬಸವಣ್ಣನವರ ಜಯಂತ್ಯೋತ್ಸವ, 21ರಂದು ಲಿ.ಪೂಜ್ಯ ಡಾ. ಚನ್ನಬಸವ ಪಟ್ಟದ್ದೇವರ 27ನೆ ಸ್ಮರಣೋತ್ಸವ ಹಾಗೂ ಏ.22ರಂದು ನಾಡೋಜ ಪೂಜ್ಯ ಮ.ಘ.ಚ ಡಾ.ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ ವಿಜ್ರಂಭಣೆಯಿಂದ ಆಚರಿಸಲಾಗುತ್ತಿದೆ ಎಂದು ಸಮಾರಂಭದ ಸ್ವಾಗತ ಸಮಿತಿಯ ಅಧ್ಯಕ್ಷರು ಹಾಗೂ ರಾಜ್ಯದ ಅರಣ್ಯ, ಪರಿಸರ ಹಾಗೂ ಜೀವಶಾಸ್ತ್ರ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರು ತಿಳಿಸಿದರು.

ಶುಕ್ರವಾರ ಸಂಜೆ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಏಪ್ರಿಲ್ 14ರಿಂದ 22ರವರೆಗೆ ಸಾಮಾಜಿಕ, ಸಾಂಸ್ಕೃತಿಕ ಹಾಗೂ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ. ಏಪ್ರಿಲ್ 19ರಂದು 75 ಜನ ಬಸವ ತತ್ವ ಪ್ರಸಾರಕರಿಗೆ ಸನ್ಮಾನ ಕಾರ್ಯಕ್ರಮ ಜರುಗಲಿದೆ ಎಂದರು.

ಏಪ್ರಿಲ್ 20ರಂದು ವಿಶ್ವಗುರು ಬಸವಣ್ಣನವರ ಬಸವ ಜಯಂತ್ಯೋತ್ಸವ ಪ್ರಯುಕ್ತ ಅಂದು ಮಧ್ಯಾಹ್ನ 12 ಗಂಟೆಗೆ ಅಕ್ಕನ ಬಳಗದ ತಾಯಂದಿರಿಂದ ವಿಶೇಷ ಕಾರ್ಯಕ್ರಮ, ಸಾಯಂಕಾಲ 4 ಗಂಟೆಗೆ ಹಿರೇಮಠ ಸಂಸ್ಥಾನದಿಂದ ಚನ್ನಬಸಾಶ್ರಮದವರೆಗೆ ಭವ್ಯ ಮೆರವಣಿಗೆ,




ಬಳಿಕ 7 ಗಂಟೆಗೆ ವೇದಿಕೆ ಕಾರ್ಯಕ್ರಮ ಜರುಗಲಿದೆ. 21ರಂದು ಬೆಳಿಗ್ಗೆ 10 ಗಂಟೆಗೆ ಪೂಜ್ಯ ಡಾ.ಚನ್ನಬಸವ ಪಟ್ಟದ್ದೇವರ 27ನೇ ಸ್ಮರಣೋತ್ಸವ ಹಾಗೂ ವಚನ ಜಾತ್ರೆಯ ಉದ್ಘಾಟನಾ ಸಮಾರಂಭ ಜರುಗಲಿದೆ. ಸಂಜೆ 6 ಗಂಟೆಗೆ ಗೋ.ರು ಚನ್ನಬಸಪ್ಪ ಅವರಿಂದ ಗ್ರಂಥ ಲೋಕಾರ್ಪಣೆ ಜರುಗಲಿದೆ ಎಂದು ಅವರು ಹೇಳಿದರು.


ಏಪ್ರಿಲ್ 22ರಂದು ಬೆಳಿಗ್ಗೆ 9 ಗಂಟೆಗೆ ನಾಡೋಜ ಪೂಜ್ಯ ಡಾ.ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ ಜರುಗಲಿದ್ದು, ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಡಂಬಳ ಗದಗ ತೊಂಟದಾರ್ಯ ಮಠದ ತೊಂಟದ ಪೂಜ್ಯ ಡಾ.ಸಿದ್ಧರಾಮ ಮಹಾಸ್ವಾಮಿಗಳು ವಹಿಸುವರು. ಹಾರಕೂಡ ಶ್ರೀಮಠದ ಪೂಜ್ಯ ಡಾ. ಚನ್ನವೀರ ಶಿವಾಚಾರ್ಯರು ನೇತೃತ್ವ ವಹಿಸುವರು.

ಭಾರತದ ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರು ಸಮಾರಂಭ ಉದ್ಘಾಟಿಸುವರು. ರಾಜ್ಯಸಭೆಯ ವಿರೋಧ ಪಕ್ಷದ ನಾಯಕರು ಹಾಗೂ ಎಐಸಿಸಿ ಅಧ್ಯಕ್ಷ ಡಾ. ಮಲ್ಲಿಕಾರ್ಜುನ ಖರ್ಗೆ ಅವರು ಗ್ರಂಥ ಲೋಕಾರ್ಪಣೆಗೊಳಿಸುವರು. ರಾಜ್ಯಪಾಲ ಥಾವರಚಂದ ಗೆಹಲೋಟ್, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ತಾನು ಅಧ್ಯಕ್ಷತೆ ವಹಿಸುವರು. ಸಾಯಂಕಾಲ 4 ಗಂಟೆಗೆ ಸಮಾರೋಪ ಸಮಾರಂಭ ಜರುಗಲಿದ್ದು, ಎಲ್ಲ ಕಾರ್ಯಕ್ರಮಗಳು ಚನ್ನಬಸವಾಶ್ರಮದಲ್ಲಿಯೇ ಜರುಗಲಿವೆ ಎಂದು ಸಚಿವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುಬಸವ ಪಟ್ಟದ್ದೇವರು, ಭಾರತೀಯ ಬಸವ ಬಳಗದ ರಾಜ್ಯಾಧ್ಯಕ್ಷ ಬಾಬುವಾಲಿ, ಮಹಿಳಾ ಘಟಕದ ಅಧ್ಯಕ್ಷೆ ಶಕುಂತಲಾ ಬೆಲ್ದಾಳೆ, ಪ್ರಮುಖರಾದ ಶಶಿಧರ ಕೋಸಂಬೆ, ಬಸವರಾಜ್ ಧನ್ನೂರ್, ಜಯರಾಜ್ ಖಂಡ್ರೆ, ಚಂದ್ರಶೇಖರ್ ಹೆಬ್ಬಾಳೆ, ಮಲ್ಲಿಕಾರ್ಜುನ್ ಮಣಗೇರಿ ಮುಂತಾದವರು ಉಪಸ್ಥಿತರಿದ್ದರು.

## ವಿವಾಹ ನಿಶ್ಚಿತಾರ್ಥದಲ್ಲಿ ಪರಿಸರ ಜಾಗೃತಿ ಅಭಿಯಾನ

# ಮದುಮಕ್ಕಳಿಂದ ಅತಿಥಿಗಳಿಗೆ ಸಸಿ ವಿತರಣೆ



ಬೀದರ್: ವಿವಾಹ ನಿಶ್ಚಿತಾರ್ಥ ಸಮಾರಂಭದಲ್ಲೇ ಪರಿಸರ ಜಾಗೃತಿ ಹಾಗೂ ಮಾಲಿನ್ಯ ನಿಯಂತ್ರಣದ ಬಗ್ಗೆ ವಿನೂತನ ಸಂದೇಶ ಸಾರಿದ ಮದುಮಕ್ಕಳ ಪರಿಸರ ಪ್ರೇಮ ಎಲ್ಲರ ಗಮನ ಸೆಳೆದಿದೆ. ನಗರದ ಝರಾ ಫಂಕ್ಷನ್ ಹಾಲ್‌ನಲ್ಲಿ ಅಖಿಲ ಭಾರತ ವಿಶ್ವವಿದ್ಯಾಲಯಗಳ ನೌಕರರ ಒಕ್ಕೂಟದ ವತಿಯಿಂದ ಆಯೋಜಿಸಲಾದ ಪರಿಸರ ಜಾಗೃತಿ ಮತ್ತು ಮಾಲಿನ್ಯ ನಿಯಂತ್ರಣ ಅಭಿಯಾನದಲ್ಲಿ ಮದುಮಕ್ಕಳಾದ ಅನುಪ ಮತ್ತು ನಂದಿನಿ ಅವರು ವಿಶೇಷ ರೀತಿಯಲ್ಲಿ ಅತಿಥಿಗಳಿಗೆ ಸಸಿಗಳನ್ನು ವಿತರಿಸುವ ಮೂಲಕ ಪರಿಸರ ಸಂರಕ್ಷಣೆಯ ಸಂಕಲ್ಪ ಬೋಧಿಸಿದರು.

ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕಿ ರಾಜ್ಯ ಹಿರಿಯ ನಾಗರಿಕರ ಪ್ರಶಸ್ತಿ ಪುರಸ್ಕೃತ ವೀರಭದ್ರಪ್ಪ ಉಪ್ಪಿನ್ ಅವರು ಮಾತನಾಡಿ, ಇದುವರೆಗೆ ಮದುವೆ ಸಮಾರಂಭಗಳಲ್ಲಿ ಮದುಮಕ್ಕಳು ಮತ್ತು ಅತಿಥಿಗಳಿಗೆ ಸಾಂಕೇತಿಕವಾಗಿ ಸಸಿ ವಿತರಿಸುವುದು ಕಂಡಿದ್ದೇವೆ. ಆದರೆ ಇದೇ ಮೊದಲ ಬಾರಿಗೆ ಮದುಮಕ್ಕಳೇ ಸ್ವತಃ ಅತಿಥಿಗಳಿಗೆ ಸಸಿಗಳನ್ನು ವಿತರಿಸಿ ಪರಿಸರ ಜಾಗೃತಿ ಮೂಡಿಸಿರುವುದು ಶ್ಲಾಘನೀಯ ಮತ್ತು ಮಾದರಿಯಾಗಿದೆ ಎಂದರು.

ಈ ವಿನೂತನ ಕಾರ್ಯಕ್ರಮದ ಮೂಲಕ ಪರಿಸರ ಸಂರಕ್ಷಣೆ, ಹಸಿರು ಅಭಿಯಾನ ಮತ್ತು ಮಾಲಿನ್ಯ ನಿಯಂತ್ರಣದ ಮಹತ್ವವನ್ನು ನೆರೆದ ಬಂಧು-ಮಿತ್ರರಿಗೆ ಮನವರಿಕೆ ಮಾಡಿಕೊಡಲಾಯಿತು. ಮದುವೆಯ ಸಂಭ್ರಮದ ನಡುವೆ ಸಾಮಾಜಿಕ ಜವಾಬ್ದಾರಿಯ ಸಂದೇಶ ನೀಡಿದ ಮದುಮಕ್ಕಳ ಕಾರ್ಯಕ್ಕೆ ಎಲ್ಲೆಡೆಯಿಂದ ಮೆಚ್ಚುಗೆ ವ್ಯಕ್ತವಾಗಿದೆ.

ಕಾರ್ಯಕ್ರಮದಲ್ಲಿ ತಾರಾಬಾಯಿ, ವಿಜಯಲಕ್ಷ್ಮಿ, ಮಲ್ಲಿಕಾರ್ಜುನ್, ಮಂದಾಕಿನಿ, ವಿಜಯಕುಮಾರ್, ರಶ್ಮಿ, ಸಾನವಿ, ಪ್ರಗ್ಯಾನ್, ಕವಿತಾ, ಹರ್ಷಿತಾ, ಸುಶ್ಮಿತಾ, ಇಬ್ಬನಿ, ಗುರುರಾಜ್, ಐಶ್ವರ್ಯ, ರಾಜಶ್ರೀ, ರವಿ, ರಿಷಬ್, ಪ್ರೇಮಲಾ, ಕಲ್ಯಾಣರಾವ್ ಬಾಳುರೆ, ಪರ್ವತ, ರಿತೇಶ್, ಭರತರಾಜ್, ವೀರೇಶ್ ಹೆಗ್ಗೆ, ರಾಜಕುಮಾರ್, ನಿರ್ಮಲಾ, ಕಾವೇರಿ, ಅಕ್ಷತಾ, ಅನುಜಾ, ಪೂಜಾ, ಹಾವಗಿರಾವ್, ಚಂದ್ರಕಲಾ, ಸುಜಾತಾ-ಸುರೇಶ್ ಪಾಂಡ್ರೆ ಸೇರಿದಂತೆ ಅನೇಕ ಬಂಧುಮಿತ್ರರು ಹಾಗೂ ಯೋಗ ಸಾಧಕರಾದ ನಿಜಲಿಂಗಪ್ಪ ತಗಾರೇ, ರಮೇಶ್ ಕೆ, ಅಶೋಕ್ ಶೀಲವಂತ, ವಿವೇಕ್ ಪಟ್ನೆ, ನಂದಕುಮಾರ್ ಕಾವಡಿ, ಚನ್ನಯ್ಯ ಹಿರೇಮಠ, ಗುರುರಾಜ ಸ್ವಾಮಿ ಸೇರಿದಂತೆ ಅಸಂಖ್ಯಾತರು ಭಾಗವಹಿಸಿದ್ದರು.

## ಅಕ್ಷರ, ಅನ್ನ ದಾಸೋಹಕ್ಕೆ ಪ್ರಾಶಸ್ತ್ಯ ನೀಡಿದ್ದ ಡಾ. ಶಿವಕುಮಾರ ಶ್ರೀಗಳು: ಶಿವಸಿದ್ಧೇಶ್ವರರು

ಬೀದರ್: ಸಿದ್ಧಗಂಗಾ ಮಠದ ಡಾ. ಶಿವಕುಮಾರ ಸ್ವಾಮೀಜಿ ಅಕ್ಷರ ಹಾಗೂ ಅನ್ನ ದಾಸೋಹಕ್ಕೆ ಪ್ರಾಶಸ್ತ್ಯ ನೀಡಿದ್ದರು ಎಂದು ಸಿದ್ಧಗಂಗಾ ಮಠದ ಶಿವಸಿದ್ಧೇಶ್ವರ ಸ್ವಾಮೀಜಿ ಹೇಳಿದರು.

ಸಿದ್ಧಗಂಗಾ ಮಠದ ಹಳೆಯ ವಿದ್ಯಾರ್ಥಿಗಳು ಹಾಗೂ ಹಿತೈಷಿಗಳ ಸಂಘದ ಜಿಲ್ಲಾ ಘಟಕದಿಂದ ನಗರದ ನಿಕಿತಾ ಫರ್ನಿಚರ್‌ನಲ್ಲಿ ಜರುಗಿದ ಡಾ. ಶಿವಕುಮಾರ ಸ್ವಾಮೀಜಿ ಅವರ ಜಯಂತಿ ಹಾಗೂ ಗುರು ವಂದನೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಶ್ರೀಗಳು ಶಿಕ್ಷಣದಿಂದಲೇ ಸಶಕ್ತ ರಾಷ್ಟ್ರ ಕಟ್ಟಲು ಸಾಧ್ಯವೆಂದು ಮನಗಂಡಿದ್ದರು. ಹೀಗಾಗಿ ಅಸಂಖ್ಯಾತ ಬಡ, ನಿರ್ಗತಿಕ ಮಕ್ಕಳಿಗೆ ಊಟ, ವಸತಿ ಸಹಿತ ಶಿಕ್ಷಣ ನೀಡಿ ಅವರ ಬಾಳು ಹಸನಾಗಿಸಿದ್ದರು ಎಂದು ತಿಳಿಸಿದರು.

ಸಿದ್ಧಗಂಗಾ ಮಠದೊಂದಿಗೆ ಜಿಲ್ಲೆಯ ಹಳೆಯ ವಿದ್ಯಾರ್ಥಿಗಳ ನಿಕಟ ಸಂಬಂಧವಿದೆ. ಹಳೆಯ ವಿದ್ಯಾರ್ಥಿಗಳ ಗುರು ಭಕ್ತಿ ಅನುಕರಣೀಯವಾಗಿದೆ ಎಂದು ಅವರು ಹೇಳಿದರು. ಸಾನಿಧ್ಯ ವಹಿಸಿದ್ದ ಬಸವ ಸೇವಾ ಪ್ರತಿಷ್ಠಾನದ ಅಧ್ಯಕ್ಷೆ ಡಾ. ಗಂಗಾಂಬಿಕೆ ಅಕ್ಕ ಮಾತನಾಡಿ,



ಶಿಕ್ಷಣ ಹಾಗೂ ದಾಸೋಹಕ್ಕೆ ಸಿದ್ಧಗಂಗಾ ಮಠದ ಕೊಡುಗೆ ಅಪಾರವಾಗಿದೆ. ಸಿದ್ಧಗಂಗಾ ಮಠ ಎಲ್ಲ ಮಠಗಳಿಗೆ ಮಾದರಿಯಾಗಿದೆ ಎಂದರು. ಜಿಲ್ಲೆಯಲ್ಲಿ ಮಠದ ಹಳೆಯ ವಿದ್ಯಾರ್ಥಿಗಳ ಸಂಘ ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿದೆ. ವಿವಿಧ ಚಟುವಟಿಕೆಗಳ ಮೂಲಕ ಡಾ. ಶಿವಕುಮಾರ ಸ್ವಾಮೀಜಿ ಅವರ ಕಾರ್ಯಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುತ್ತಿದೆ ಎಂದು ಅವರು ಹೇಳಿದರು. ಮುಖ್ಯ ಅತಿಥಿಯಾಗಿದ್ದ ಕರ್ನಾಟಕ ಪದವಿಪೂರ್ವ ಕಾಲೇಜು ಪ್ರಾಚಾರ್ಯ ಡಾ. ಬಸವರಾಜ್ ಬಲ್ಲೂರ್ ಅವರು ಮಾತನಾಡಿ, ಡಾ. ಶಿವಕುಮಾರ ಸ್ವಾಮೀಜಿ ಅವರ ಸೇವೆಗೆ ಸಾಟಿ ಇಲ್ಲ. ಅವರ ಕಾರ್ಯಗಳನ್ನು ಶಬ್ದಗಳಲ್ಲಿ ವರ್ಣಿಸಲು ಆಗುವುದಿಲ್ಲ. ಶಿವ ಸಿದ್ಧೇಶ್ವರ ಸ್ವಾಮೀಜಿಯವರು ಡಾ. ಶಿವಕುಮಾರ ಸ್ವಾಮೀಜಿ ಅವರ ಕಾರ್ಯಗಳನ್ನು ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ ಎಂದು ತಿಳಿಸಿದರು.ನಿಡಗುಂದಾ ಸ್ವಾಮೀಜಿ ಸಾನಿಧ್ಯ, ಸಿದ್ಧಗಂಗಾ ಮಠದ ಹಳೆಯ ವಿದ್ಯಾರ್ಥಿ ಪ್ರಕಾಶ ಟೊಣ್ಣೆ ಅಧ್ಯಕ್ಷತೆ ವಹಿಸಿದ್ದರು. ಉದ್ಯಮಿ ಅನಿಲಕುಮಾರ್ ಪಾಟೀಲ್, ಪ್ರಮುಖರಾದ ಬಸವರಾಜ್ ಧನ್ನೂರ್, ಬಾಬುವಾಲಿ, ನಾಗರಾಜ್ ಕರ್ಪೂರ್, ಚಂದ್ರಶೇಖರ್ ಹೆಬ್ಬಾಳೆ, ವಿರೂಪಾಕ್ಷ ಗಾದಗಿ, ಮಡಿವಾಳಪ್ಪ ಮಂಗಲಗಿ, ಶಾಂತಾ ಖಂಡ್ರೆ, ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಶಿವಕುಮಾರ ಪಾಟೀಲ್ ತೇಗಂಪುರ, ಉಪಾಧ್ಯಕ್ಷ ರಮೇಶ್ ಪಾಟೀಲ್ ಪಾಶಾಪುರ, ಪ್ರಧಾನ ಕಾರ್ಯದರ್ಶಿ ದೇವೇಂದ್ರ ಕರಂಜೆ, ಬಸವರಾಜ್ ಕೊಳ್ಳೂರ್, ಸಂಜುಕುಮಾರ ಹುಣಜಿ, ಶಿವಶರಣಪ್ಪ ನಿಣ್ಣೆ, ಮಹಾದೇವ ಪಟ್ನೆ, ಬಾದಾಮಿಯ ಶಿಕ್ಷಕ ಸಂಜುಕುಮಾರ ಜಮಾದಾರ್ ಮತ್ತಿತರರು ಉಪಸ್ಥಿತರಿದ್ದರು. ನಿಕಿತಾ ಫರ್ನಿಚರ್ ಮಾಲೀಕ ಜೈರಾಜ್ ಖಂಡ್ರೆ ಸ್ವಾಗತಿಸಿದರು.

# ಈ ತಂಪಿನ ಅಂಗಳದಲಿ ನನ್ನ ನಿನ್ನ ನಡುವೆಯಲಿ

■ ಉದಯರಶ್ಮಿ ದಿನಪತ್ರಿಕೆ

ಚೆಂದದ ಚಂದನಾ

ಪೂರ್ಣ ಚಂದಿರನಂತೆ ಹೊಳೆಯುವ ನಿನ್ನ ಮುಖ, ಆ ಮುಖದಲ್ಲಿ ಬೆಳದಿಂಗಳಿನಂತೆ ಬೆಳಗುವ ನಗು ಕಾಣಲು ಕಾದು ಕುಳಿತ ಅದೆಷ್ಟೋ ದಿನಗಳು ಕಣ್ಣ ಮುಂದಿವೆ. ಆ ನಗುಮೊಗದಲ್ಲಿ ಮಲ್ಲಿಗೆಯ ಹೂಗಳು ಅರಳಿದಂತೆ ಕಾಂತಿಯುಕ್ತ ಕಂಗಳು ನನ್ನನ್ನು ಕರೆದಂತೆ ಭಾಸವಾಗುತ್ತದೆ. ಹಂಸದಂತಹ ನಡಿಗೆ ಕಾರ್ಮೋಡದಂತೆ ಕಪ್ಪಾದ ಸೊಂಪಾದ ಕೂದಲು, ಬೆನ್ನ ತುಂಬ ಹರಡಿದ ಕೇಶರಾಶಿ ನೋಡುವುದೇ ಚಂದ. ನಿನ್ನನ್ನು ನೋಡುವುದೆಂದರೆ ಕಣ್ಣಿಗೊಂದು ಹಬ್ಬವೇ ಸರಿ. ನಿನ್ನನ್ನು ಕಂಡ ಅರಸಿಕನೂ ರಸಿಕನಾಗಿ ಬಿಡುತ್ತಾನೆದಿನ್ನು ನಿನ್ನ ಮಾತುಗಳೋ ವೀಣೆಯ ನಾದದಂತೆ ಮಧುರ ಮಧುರ. ಒಂದೇ ಮಾತಿನಲ್ಲಿ ಹೇಳುವುದಾದರೆ ನನಗಾಗಿ ಆಗಸದಿಂದ ಇಳಿದ ರತಿ ನೀನು. ಮೊದಲ ನೋಟದಲ್ಲೇ ನಿನ್ನಲ್ಲಿ ಕಳೆದು ಹೋದೆ ನಾನು.

ಮನದಲ್ಲಿನ ಪ್ರೀತಿ ದಿನೇ ದಿನೇ ಚಿಗುರೊಡೆದಿದೆ. ಪುಟ್ಟ ಪುಟ್ಟ ಎಲೆಗಳಿಂದ ಕೂಡಿದ ಬಳ್ಳಿಯಾಗಿದೆ. ಬೆಳೆಯುತ್ತ ಬೆಳೆಯುತ್ತ ಬಳ್ಳಿಯ ನೆತ್ತಿಯ ಮೇಲಿನ ಮೊಗ್ಗಾಗಿದೆ. ಮೊಗ್ಗು ಹಿಗ್ಗಿ ಹಿಗ್ಗಿ ಈಗ ಹೂವಾಗಿದೆ. ಮನದ ಮೂಲೆಯಲ್ಲಿನ ತರಹ ತರಹದ ಬಯಕೆಗಳು ಚಂದ ಚಂದದ ಹೂಗಳನು ಅರಳಿಸಿವೆ. ಆ ಬಯಕೆಗಳ ಈಡೇರಿಸಲು ಬಾ ಮನದೊಡತಿ ಎಂದು ನಿನ್ನ ಕೈ ಬೀಸಿ ಕರೆಯುತಿವೆ. ಎಲ್ಲಿಯ ಮಾಮರ ಎಲ್ಲಿಯ ಕೋಗಿಲೆ ಎಲ್ಲೆಂದಿಲ್ಲಿಯ ಬಂಧ. ಎಲ್ಲಿಯ ಮಹಲಿನ ನೀನು ಎಲ್ಲಿಯ ಗುಡಸಲಿನ ನಾನು ಪ್ರೇಮಿಗಳ ಹೃದಯಗಳಿಗೆ ಎಲ್ಲೆಂದಿಲ್ಲಿಗೆ ನಂಟುಂಟು. ಪರಸ್ಪರ ಒಪ್ಪಿವೆ ಭಾವಗಳು. ಇನ್ನೆಲ್ಲಿಯದು ಭೇದ ಭಾವಗಳು? ಜಾತಿ ಪ್ರತಿಷ್ಠೆ ಮೇಲೆ ಕೆಳಗೆ ಪ್ರೀತಿಯ ಕಣ್ಣಿಗೆ ಕಾಣದು. ಮನಗಳು ಒಪ್ಪಿದ ಮೇಲೆ ದೇಹಗಳ ಅಪ್ಪುಗೆಗೆ ಯಾರಪ್ಪನ ಅಪ್ಪಣೆ ಬೇಕು? ಪ್ರೇಮಿಗಳ ಮನದ ಬೇಗುದಿಯನು ಹೊರಗಿನವ-ರಿಂದ ಗುರುತಿಸಲೂ ಆಗದು. ಹೃದಯದ ವೇದನೆ ತಿಳಿಯಲೂ ಆಗದು. ಪ್ರೀತಿ ನದಿಯ ನೀರಿನಂತೆ ಯಾವುದನ್ನೂ ಲೆಕ್ಕಿಸದೇ ಮುನ್ನುಗ್ಗುವುದು. ಪ್ರೀತಿಯೆಂಬುದು ನನಗೆ ಬರಿ ಕನಸಲ್ಲ. ನಿದಿರೆಗೆ ಜಾರಲು ಬಿಡದ ಸದಾ ಕನವರಿಸುವ ಕನವರಿಕೆ. ಹೀಗೆ ಒಬ್ಬನೇ ಇರುವಾಗ ಸದಾ ಕನವರಿಸುತ್ತಲೇ ಇರುತ್ತೇನೆ.








ನೀನು ಪರಿಚಯವಾದುದು ಒಂದು ರೋಚಕ ಪ್ರಸಂಗವೇ ಅನ್ನು. ನನ್ನ ಅವಿರತ ಓದಿನ ಫಲವಾಗಿ ಪ್ರತಿಷ್ಠಿತ ವಿವಿಯಲ್ಲಿ ಓದುವ ಅವಕಾಶ ಲಭಿಸಿತು. ವಿವಿಯಲ್ಲಿ ಒಳ್ಳೆಯ ಅಂಕ ಗಳಿಸಿದವರಿಗೆ ಸನ್ಮಾನ ಸಮಾರಂಭದಲ್ಲಿ ನೀನು ನನ್ನ ಕಣ್ಣಿಗೆ ಬಿದ್ದೆ. ಹುಡುಗಿಯರೆಂದರೆ ಮಾರು ದೂರು ಜಿಗಿಯುತ್ತಿದ್ದ ನಾನು ಗೆಳೆಯನಾಗಲು ನಿನ್ನೆದರು ಕೈ ಚಾಚಿದ್ದೆ. ಮೊದಮೊದಲು ಒಳ್ಳೆಯ ಸ್ನೇಹಿತರಾಗಿ ಕಾಲೇಜಿನ ವಿಷಯ ಪರಸ್ಪರ ಇಷ್ಟಾನಿಷ್ಟಗಳನ್ನು ಹಂಚಿಕೊಳ್ಳುತ್ತಿದ್ದೆವು. ಈ ನಡುವೆ ನಿನ್ನನ್ನು ಮನದಲ್ಲೇ ಆರಾಧಿಸತೊಡಗಿದೆ. ಆರಂಭದಲ್ಲಿ ಸ್ವಲ್ಪ ಅಳುಕಿದ್ದರೂ ಸಂಭಾಳಿಸಿಕೊಂಡು ನಿನ್ನ ಮನದ ಭಾವನೆಗಳಿಗೆ ಚೆನ್ನಾಗಿ ಶೃತಿ ಮಿಡಿದೆ. ನನ್ನಲ್ಲಾದ ಬದಲಾವಣೆ ಕಂಡು ನಾನೇ ನಂಬದಾದೆ. ಕೂಲ್ ಆಗಿ ಪಟಪಟನೆ ಅರಳು ಹುರಿದಂತೆ ಮಾತನಾಡತೊಡಗಿದೆ. ಕ್ಲಿಷ್ಟವೆನಿಸಿದ್ದ ಪ್ರೀತಿಯ ನಿವೇದನೆಯನ್ನು ಸರಳವಾಗಿ ಹೇಳಿ ಮುಗಿಸಿದ್ದೆ. ಆಗ ನಿನ್ನಲ್ಲಿ ಅರೆಕ್ಷಣ ಮೌನ, ಮರುಕ್ಷಣ ನಿನ್ನದು ಇಂಟ್ರೆಸ್ಟಿಂಗ್ ಪರ್ಸನಾಲಿಟಿ ಕಣೋ ನೀನಂದ್ರೆ ನನಗಿಷ್ಟ ಎನ್ನುತ್ತ ಲಘುವಾಗಿ ತಬ್ಬಿದೆ. ನಿನ್ನುಸಿರು ನನ್ನೆದೆಗೆ ಸೋಕಿತು ನಿನ್ನೆದೆಗೆ ನನ್ನ ಕೈ ತಾಕಿತು. ನಿನ್ನ ಕೈ ಹಿಡಿದು ಸಂತಸದಿ ಮಾತನಾಡುತ್ತ ಪಾರ್ಕಿನಲ್ಲಿದ್ದ ಬೆಂಚಿನ ಮೇಲೆ ಕುಳಿತಾಗ ಮೊದಲ ಭೇಟಿಯ ನೆನಪುಗಳನ್ನು ಮೆಲಕು ಹಾಕತ್ತಿದ್ದರೆ ಕೊರೆವ ಚಳಿಯಲ್ಲಿ ನಿಗಿನಿಗಿ ಕೆಂಡದ ಬಳಿ ನಿಂತ ಅನುಭವವಾಗಿತ್ತು. ಬೆರಳುಗಳಲ್ಲಿ ಬೆರಳು ಸೇರಿಸಿ ನಾಚುತ್ತ ಐಲವ್ಯೂ ಹೇಳಿದಾಗ ಎದೆಗೆ ಹೂಬಾಣ ಮೆಲ್ಲನೆ ತಾಕಿದಂತಾಯಿತು.

ನೀಲಿ ಕಂಗಳ ಚೆಲುವೆ ಗೌರ ವರ್ಣದ ನಿರಾಭರಣ ಸುಂದರಿ ಓದಿನಲ್ಲಿ ಬುದ್ಧಿವಂತೆ ಬೇರೆ. ರಾಣಿ ಜೇನಿನಂತಿದ್ದ ನಿನ್ನ ಹಿಂದೆ ಹುಡುಗರ ಸಾಲು ಸಾಲು. ಇದರ ಮೇಲೆ ಕಳಶವಿಟ್ಟಂತೆ ಶ್ರೀಮಂತ ಅಪ್ಪನ ಒಬ್ಬಳೇ ಮಗಳು. ಇದೆಲ್ಲ ಸಾಲದೆಂಬಂತೆ ಲಕ್ಷ ಲಕ್ಷ ಸಂಬಳ ತರುವ ಸಾಫ್ಟ್ ವೇರ್ ಇಂಜಿನಿಯರ್ ಬೇರೆ. ಕಾರಣವಿಲ್ಲದೇ ಯಾರೊಂದಿಗೂ ಮಾತನಾಡದ ಸ್ವಭಾವ ನನ್ನದು. ಕೇಳಿದ್ದಕ್ಕಷ್ಟೇ ಉತ್ತರ ಕೊಟ್ಟು ಚುಟುಕಾಗಿ ಮಾತು ಮುಗಿಸುತ್ತಿದ್ದ ಮಿತಭಾಷಿಯಾಗಿದ್ದೆ. ನಿನ್ನ ಗೆಳೆತನದಲ್ಲಿ ಅದಾವಾಗ ನಾನು ಮಾತಿನ ಮಲ್ಲನಾಗಿ ಬದಲಾಗಿದ್ದೆನೋ ತಿಳಿಯದು.

ಅಂದುಮುಸ್ಸಂಜೆನೀನುಪೇಟೆಗೆಹೋಗುವ ನೆಪ ಹೇಳಿ ನನ್ನ ಭೇಟಿಗೆ ಬಂದೆ. ರೂಮಿನ ಬಾಗಿಲು ತೆರೆದೆ. ಹೊಳೆಯುವ ಸೌಂದರ್ಯ ರಾಶಿ ಕಂಡು ರಾತ್ರಿಯಲ್ಲಿ ಕಂಡ ಕನಸುಗಳ ನನಸಾಗಿಸಲು ಮನಸ್ಸು ಹಾತೊರೆಯಿತು. ಹೆದರಿದ ಹರಿಣಿಯಂತೆ ದೂರದಲ್ಲಿ ನಿಂತಿ-ದ್ದೆ. ಸಾವಕಾಶವಾಗಿ ನಿನ್ನನ್ನು ನನ್ನತ್ತ ಎಳೆದು ಮೊಗದತ್ತ ಮೊಗ ತಂದು ಅಧರಗಳಿಂದ ಅಧರಗಳಿಗೆ ಬೀಗ ಹಾಕಲು ಸನ್ನದ್ಧನಾದೆ. ನನ್ನ ಕುರುಚಲು ಗಡ್ಡ ನಿನ್ನ ಮೃದುವಾದ ಗಲ್ಲಕೆ ತಾಕಿತು. ರೋಮಾಂಚಿತಳಾದ ನೀನು ತುಸು ನಾಚಿಕೆಯಿಂದ ಮೆಲ್ಲನೆ ತಳ್ಳಿದೆ. ಜೇನಿನ ಮತ್ತಿನಲ್ಲಿದ್ದ ನಾನು ನಿನ್ನ ಅಧರಗಳತ್ತ ಮತ್ತೆ ಬಾಗಿದೆ. ಈ ಸಲ ನೀನೂ ಸವಿಗೆ ಕಾದವಳಂತೆ ಅಧರಗಳ ಅರಳಿಸಿದೆ. ಅಧರಗಳಿಗೆ ಬೀಗ ಹಾಕುವ ವೇಗ ಇನ್ನೂ ಜಾಸ್ತಿ ಆಯಿತು. ಅದೇ ಮೊದಲ ಸಲದ ಚುಂಬನದ ಅನುಭವ ಈರ್ವರಿಗೂ. ಬಿಸಿಲ ಧಗೆಯಲಿ ಕಾದು ಕುಳಿತ ಭುವಿಗೆ ಮೊದಲ ಸಲದ ಮಳೆರಾಯನ ಹನಿ ಹನಿಗಳ ಚುಂಬನದಂತಿತ್ತು ಆ ಚುಂಬನ. ನಿನ್ನ ಮುಂಗುರುಳುಗಳು ನನ್ನ ಕೆನ್ನೆಯನ್ನು ಪದೇ ಪದೇ ಮುದ್ದಾಡುತ್ತಿದ್ದವು. ಆ ನಡುವೆ ಇಬ್ಬರ ನಡುವಿದ್ದ ಅಂತರ ದೂರವಾಗಿ ದೇಹಗಳು ಅಂಟಿ-ಕೊಂಡಿದ್ದವು. ನಿನ್ನೆರಡು ಕೈಗಳು ನನ್ನ ಹೆಗಲನ್ನು ಗಟ್ಟಿಯಾಗಿ ಹಿಡಿದದ್ದವು. ಇಬ್ಬರ ಹೃದಯಗಳು ಆಗಸದೆತ್ತರಕ್ಕೆ ಬಡಿದುಕೊಳ್ಳುತ್ತಿದ್ದವು. ಒಂದೆರಡು ನಿಮಿಷದ ಬಳಿಕ ನಿನ್ನ ತಲೆಗೆ ಏನು ಹೊಳೆಯಿತೋ ಗೊತ್ತಿಲ್ಲ. ಧ್ವನಿ ಆಚೆ ಬರದಿರುವ ಸ್ಥಿತಿಯಲ್ಲಿ ಸ್ವಲ್ಪ ಸ್ವಲ್ಪ ಸರಿಯುತ್ತ ನನ್ನ ಬಿಗಿಯಾದ ತೋಳ ಬಂಧನದಿಂದ ಬಿಡಿಸಿಕೊಳ್ಳುತ್ತ, ಬಿಡು ಬಿಡು ಸಾಕು ಎನ್ನುವ ಕೈ ಸನ್ನೆ ಮಾಡುತ್ತ ಲಘುವಾಗಿ ತಬ್ಬಿದೆ. ಅಸ್ತವ್ಯಸ್ತವಾಗಿದ್ದ ನನ್ನ ಕ್ರಾಪನ್ನು ಸರಿ ಮಾಡುತ್ತ ಹಣೆಗೆ ಹೂಮುತ್ತನ್ನಿತ್ತೆ. ಆಗ ಮಧುರ ಜೇನಿನ ಸವಿ ಪಾನ ಹೀರುವ ವೇಗ ತಗ್ಗಿತ್ತು. ಒಂದು ಕೈಯಿಂದ ನನ್ನ ಭುಜವನ್ನು ಇನ್ನೊಂದು ಕೈಯಿಂದ ನನ್ನನ್ನು ಗಟ್ಟಿಯಾಗಿ ಹಿಡಿದುಕೊಂಡೆ. ಪ್ರೇಮ ಪಾಠ ಇಂದಿಗಿಷ್ಟೇ ಸಾಕು ಎಂದೆ. ಪ್ರಣಯದ ಮುಂದಿನ ಪಾಠದ ಪಯಣ ಮದುವೆಯ ಮಮತೆಯ ಬಂಧನದ ನಂತರವೆ ಎನ್ನುತ್ತ ಮುತ್ತಿನ ಮತ್ತಿನಲ್ಲಿ ಕಳೆದು ಹೋದ ನನ್ನನ್ನು ಎಚ್ಚರಿಸಿದೆ. ಮನೆಗೆ ಹೋಗಲು ಅವಸರಿಸಿದೆ. ಘಮ ಘಮ ಎದೆಯೆಲ್ಲ ನಿನ್ನ ಮೈ ಗಂಧದ ನಡುವೆ ನನ್ನ ಮಾತು ತೊದಲು ತೊದಲೆನಿಸಿತು. ಅಂಥ ರಸಮಯ ಗಳಿಗೆಯಲ್ಲಿ ಹಾಗೆ ಬಿಟ್ಟು ಬಿಡಲು ಮನಸ್ಸು ಒಪ್ಪಲಿಲ್ಲ. ಮೊದಲೆ ತುಂಟಿ ನೀನು ತುಂಟ ನಗು ಬೀರಿ ಬೈಕ್ ಏರಿ ಕೈ ಬೀಸಿ ಹೊರಟೇ ಬಿಟ್ಟೆ. ಬಹಳ ಕಾಡಿ ಬೇಡಿ ಪ್ರೀತಿಸಿ ಮದುವೆಯಾದೆ ನಿನ್ನ ಬಾಳಿಗೆ ಜೋಡಿಯಾದೆ. ನಮ್ಮಿಬ್ಬರ ಜೋಡಿ ನೋಡಿ ಇತರರಿಗೆ ಸಣ್ಣ ಅಸೂಯೆ ಆಗುವುದು ಸುಳ್ಳಲ್ಲ. ಇಂದು ಮೊದಲ ರಾತ್ರಿ ಸುಂದರ ದಾಂಪತ್ಯ ಪಯಣ ಶುರು ಮಾಡುವ ಶುಭಗಳಿಗೆ. ಈ ರಾತ್ರಿ ಮಾತ್ರವಲ್ಲ ಪ್ರತಿ ರಾತ್ರಿಯೂ ಪ್ರಥಮ ರಾತ್ರಿಯಾಗಲಿದೆ ಎಂಬ ಆಸೆ ನನ್ನಲ್ಲಿದೆ. ತುಂಟ ತುಂಟಿಯ ತುಂಟಾಟ ಮುಗಿಲು ಮುಟ್ಟುವ ಸಮಯ ಸಮೀಪಿಸುತ್ತಿದೆ. 'ಈ ಸುಂದರ ಬೆಳದಿಂಗಳ ಈ ತಂಪಿನ ಅಂಗಳದಲಿ ನನ್ನ ನಿನ್ನ ನಡುವೆಯಲಿ.' ಎಂಬ ನಿನ್ನಿಷ್ಟದ ಹಾಡು ಗುಣುಗುತ್ತ ನಿನಗಾಗಿ ಕಾದಿರುವೆ ಚೆಲುವೆ. ಸನಿಹಕೆ ಬಂದು ಅರ್ಧಕ್ಕೆ ನಿಂತ ಪ್ರಣಯದಾಟದ ಪಯಣ ಜೀವನ ಪೂರ್ತಿ ಮುಂದುವರೆಸು ಜೀವದ ಗೆಳತಿ.





**ಇಂತಿ ನಿನ್ನ ಚೆಂದದ ಚಂದ್ರು**

ಲೇಖನ
■ ಜಯಶ್ರೀ.ಜೆ. ಅಬ್ಬಿಗೇರಿ
ಇಂಗ್ಲೀಷ್ ಉಪನ್ಯಾಸಕರು
ಬೆಳಗಾವಿ



## ಮಹರ್ಷಿ ಭಗೀರಥ ಜಯಂತಿ ಏ. 23ರಂದು: ಯಾದಗಿರಿಯಲ್ಲಿ ಭಕ್ತಿ-ಸಂಸ್ಕೃತಿ ಸಂಭ್ರಮಕ್ಕೆ ಸಜ್ಜು

ಯಾದಗಿರಿ:ಮಹರ್ಷಿ ಭಗೀರಥರ ತಪಸ್ಸು, ತ್ಯಾಗ ಮತ್ತು ಜನಕಲ್ಯಾಣದ ಆದರ್ಶಗಳನ್ನು ಸ್ಮ-ರಿಸುವ ಮಹರ್ಷಿ ಭಗೀರಥ ಜಯಂತಿ ಆಚರಣೆಗೆ ಯಾದಗಿರಿ ನಗರ ಸಜ್ಜಾಗಿದೆ. ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಏಪ್ರಿಲ್ 23ರಂದು ಬೆಳಿಗ್ಗೆ 11:30ಕ್ಕೆ ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ಮುಖ್ಯ ಕಾರ್ಯಕ್ರಮ ನಡೆಯಲಿದೆ ಎಂದು ಜಿಲ್ಲಾ ಭಗೀರಥ ಸಂಘದ ಜಿಲ್ಲಾಧ್ಯಕ್ಷ ಮಲ್ಲಿಕಾರ್ಜುನ ಕಟ್ಟಿಮನಿ ತಿಳಿಸಿದ್ದಾರೆ.

ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿ ಜಯಂತಿಯನ್ನು ಹೆಚ್ಚು ಅರ್ಥ-ಪೂರ್ಣವಾಗಿ ಆಚರಿಸುವ ಉದ್ದೇಶದಿಂದ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು. ಮಹರ್ಷಿ ಭಗೀರಥರ ಜೀವನ ಮೌಲ್ಯಗಳನ್ನು ಯುವಪೀಳಿಗೆಗೆ ಪರಿಚಯಿಸುವುದು ಮತ್ತು ಸಮಾಜದಲ್ಲಿ ಏಕತೆ-ಸೌಹಾರ್ದತೆಯನ್ನು ಬಲಪಡಿಸುವುದು ಕಾರ್ಯಕ್ರಮದ ಮುಖ್ಯ ಗು-ರಿಯಾಗಿದೆ ಎಂದರು.

ಜಯಂತಿಯ ಅಂಗವಾಗಿ ಬೆಳಿಗ್ಗೆ 9 ಗಂಟೆಗೆ ರೈಲ್ವೆ ನಿಲ್ದಾಣದಿಂದ ಮೆರವಣಿಗೆ ಆರಂಭವಾಗಲಿದ್ದು, ನಗರದ ಪ್ರಮುಖ ವೃತ್ತಗಳನ್ನು ಸುತ್ತಿ ಸರ್ಕಾರಿ ಪದವಿ ಮಹಾವಿದ್ಯಾಲಯದವರೆಗೆ ಸಾಗಲಿದೆ. ಮೆರವಣಿಗೆಯಲ್ಲಿ ಸಾಂಪ್ರದಾಯಿಕ ವಾದ್ಯಗಳು, ಭಕ್ತಿಪರ ಘೋಷಣೆಗಳು ಹಾಗೂ ವಿವಿಧ ಕಲಾತಂಡಗಳ ಪ್ರದರ್ಶನಗಳು ನಡೆಯಲಿದ್ದು, ನಗರದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಲಿದೆ.

ಮುಖ್ಯ ಸಮಾರಂಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪ ದರ್ಶನಾಪುರ, ವಿಧಾನಪ-ರಿಷತ್ ವಿರೋಧ ಪಕ್ಷದ ನಾಯಕ ಛಲುವಾದಿ ನಾರಾಯಣಸ್ವಾಮಿ, ಶಾಸಕರಾದ ಚೆನ್ನಾರೆಡ್ಡಿ ಪಾಟೀಲ್ ತುನ್ನೂರ, ರಾಜಾ ವೇಣುಗೋಪಾಲ ನಾಯಕ ಹಾಗೂ ಶರಣಗೌಡ ಕಂದಕೂರ ಸೇ-ರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆ.

## ವಿದ್ಯಾರ್ಥಿಗಳು ಉತ್ತಮ ಕನಸು ನನಸು ಮಾಡಲು ಪರಿಶ್ರಮಿಸಿ: ಶಾಹಾಬಾದಕರ್

ಬೀದರ್: ವಿದ್ಯಾರ್ಥಿಗಳು ಉತ್ತಮ ಕನಸು ಕಂಡು ಅನ್ನು ನನಸು ಮಾಡಲು ನಿರಂತರ ಪರಿಶ್ರಮಿಸಬೇಕು ಅಂದಾಗ ಸಮಾಜದಲ್ಲಿ ತಲೆ ಎತ್ತಿ ನಿಲ್ಲಲು ಸಾಧ್ಯವೆಂದು ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಬೀದರ ಉಪನಿರ್ದೇಶಕರಾದ ಚಂದ್ರಕಾಂತ ಶಾಹಾಬಾದಕರ್ ಅವರು ಹೇಳಿದರು.

ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಕರ್ನಾಟಕ ಪದವಿಪೂರ್ವ ಕಾಲೇಜು ಆಯೋಜಿಸಿದ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆ ಹಣ ಗಳಿಕೆಗಾಗಿ ಹುಟ್ಟಿದ ಸಂಸ್ಥೆಯಲ್ಲ ಕಡಿಮೆ ಶುಲ್ಕದಲ್ಲಿ ಗುಣಾತ್ಮಕ ಶಿಕ್ಷಣ ನೀಡುವದರೊಂದಿಗೆ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಯೇ ಈ ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ. ಕಳೆದ ಹಲವು ವರ್ಷಗಳಿಂದ ಜಿಲ್ಲೆ ಮಟ್ಟದಲ್ಲಿ ರ್‍ಯಾಂಕುಗಳನ್ನು ಸಾಧಿಸುತ್ತಿರುವ ವಿದ್ಯಾರ್ಥಿಗಳ ಬಗ್ಗೆ ಸಂತಸ ವ್ಯಕ್ತಪಡಿಸಿದ ಅವರು, ಇದು ಸಂಸ್ಥೆಯ ಮಾರ್ಗದರ್ಶನ ಮತ್ತು ಉಪನ್ಯಾಸಕರ ಶ್ರಮದ ಫಲವಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಅಧ್ಯಕ್ಷ ಬಸವರಾಜ್ ಜಾಬಶೆಟ್ಟಿಯವರು ಮಾತನಾಡಿ, ನಮ್ಮ ಸಂಸ್ಥೆಯು ಸ್ಥಾಪನೆಯಾದ ದಿನದಿಂದಲು ಹಣ ಗಳಿಕೆಯ ಉದ್ದೇಶವಿಲ್ಲದೆ ಗುಣಾತ್ಮಕ ಹಾಗೂ ಮೌಲ್ಯಾಧಾರಿತ ಶಿಕ್ಷಣವನ್ನು ಅತ್ಯಂತ ಕಡಿಮೆ ವೆಚ್ಚದಲ್ಲಿ ನೀಡುವುದು ಎಂಬ ಮಹತ್ವದ ಧ್ಯೇಯವನ್ನು ಹೊಂದಿದೆ. ಈ ಧ್ಯೇಯದ ಫಲವಾಗಿ ನಮ್ಮ ವಿದಾರ್ಥಿಗಳು ವರ್ಷದಿಂದ ವರ್ಷಕ್ಕೆ ಜಿಲ್ಲಾ ಮಟ್ಟದಲ್ಲಿ ಉತ್ತಮ ಫಲಿತಾಂಶವನ್ನು ಸಾಧಿಸುತ್ತಿರುವುದು ಹೆಮ್ಮೆಯ ವಿಷಯ. ಯಶಸ್ಸು ಒಂದೆ ದಿನದಲ್ಲಿ ಸಿಗುವುದಿಲ್ಲ ಎಂದರು.

ಅದು ನಿರಂತರ ಪರಿಶ್ರಮ, ಶಿಸ್ತು ಮತ್ತು ಧೃಡ ನಿಶ್ಚಯದಿಂದ ಮಾತ್ರ ಸಾಧ್ಯ. ನಮ್ಮ ಉಪನ್ಯಾಸಕರ ಶ್ರಮ ಪೋಷಕರ ಬೆಂಬಲ ಮತ್ತು ವಿದ್ಯಾರ್ಥಿಗಳ ಸಮರ್ಪಣಭಾವ ಈ ಸಾಧನೆಗೆ ಮೂಲ. ಈ ಸಂಧರ್ಭದಲ್ಲಿ ಉತ್ತಮ ಸಾಧನೆ ಮಾಡಿದ ಎಲ್ಲ ವಿದ್ಯಾರ್ಥಿಗಳಿಗೆ ಹೃತ್ಪೂರ್ವಕ ಅಭಿನಂದನೆಗಳು ಈ ಉತ್ಸಾಹವನ್ನು ಮುಂದುವರೆಸಿ ಭವಿಷ್ಯದಲ್ಲಿ ಇನ್ನಷ್ಟು ಎತ್ತರದ ಸಾಧನೆ ಮಾಡಲೆಂದು ಅವರು ಶುಭ ಹಾರೈಸಿದರು.

ಮುಖ್ಯ ಅತಿಥಿಗಳಾದ ಸಂಸ್ಥೆಯ ಉಪಾಧ್ಯಕ್ಷ ಬಿ.ಜಿ. ಶೆಟಕಾರ್ ಅವರು ಮಾತನಾಡಿ, ವಿದ್ಯಾರ್ಥಿಗಳು ಜೀವನದಲ್ಲಿ ಗುರಿ, ಪರಿಶ್ರಮ, ನಿಷ್ಠೆಯೆಂಬ ಮೂರು ಅಂಶಗಳಿದ್ದರೆ ಯಶಸ್ಸು ಖಚಿತ ವಿದ್ಯಾರ್ಥಿಗಳು ಭವಿಷ್ಯದ ಜವಾಬ್ದಾರಿತ ನಾಗರಿಕರಾಗಿದ್ದು ದೇಶದ ಪ್ರಗತಿಗೆ ಕೈಜೋಡಿಸಲು ಕರೆ ನೀಡಿದರು. ಸಂಸ್ಥೆಯ ಕಾರ್ಯದರ್ಶಿ ಸತೀಶ್ ಪಾಟೀಲ್, ಆಡಳಿತ ಮಂಡಳಿ ಸದಸ್ಯರಾದ ಹತ್ತಿ ಮಲ್ಲಿಕಾರ್ಜುನ್, ಶ್ರೀನಾಥ ನಾಗೂರೆ, ಶಿವಶಂಕರ್ ಬಿ. ಶಟಕಾರ್ ಹಾಗೂ ಪದವಿ ಕಾಲೇಜಿನ ಪ್ರಾಚಾರ್ಯ ಸೋಮನಾಥ ಬಿರಾದಾರ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಕಲಾ ವಿಭಾಗದ ಲಕ್ಷ್ಮಿ ಜವಾಹರ್ 589 (98.16%) ಜಿಲ್ಲಾ ಮಟ್ಟದ ತೃತೀಯ ಸ್ಥಾನ, ವಾಣಿಜ್ಯ ವಿಭಾಗದ ಹರೀಶ್ ಶಾಂತಕುಮಾರ್ 579 (96.5%) ಜಿಲ್ಲಾ ಮಟ್ಟದ 5ನೇ ಸ್ಥಾನ ಹಾಗೂ ವಿಜ್ಞಾನ ವಿಭಾಗ ಕಾಲೇಜಿನ ಟಾಪರ್ ಅನಂತಕುಮಾರ್ ಅನಜಪ್ಪ – 529 (88.16%) ಅವರಿಗೆ ತಲಾ 5000ರೂ.ಗಳ ನಗದು ಬಹುಮಾನ ನೀಡಲಾಯಿತು.

# ಸಮ ಸಮಾಜದ ಹರಿಕಾರ ಬಸವಣ್ಣ

### ನಾಳೆ (ಏಪ್ರೀಲ್-20 ಸೋಮವಾರ) ಜಗಜ್ಯೋತಿ, ವಿಶ್ವಗುರು ಬಸವಣ್ಣನವರ ಜಯಂತಿ ಪ್ರಯುಕ್ತ ಈ ವಿಶೇಷ ಲೇಖನ


■ ಉದಯರಶ್ಮಿ ದಿನಪತ್ರಿಕೆ

ಮಹಾಮಾನವತಾವಾದಿ ಬಸವಣ್ಣನವರು 12 ನೇಯ ಶತಮಾನದ ಮಹಾನ್ ಕ್ರಾಂತಿಕಾರಿ, ಸಮಾಜ ಸುಧಾರಕ ಮತ್ತು ತತ್ವಜ್ಞಾನಿಯಾಗಿದ್ದರು. ಅವರು ತನ್ನ ವಚನಗಳ ಮೂಲಕ ಸಮಾಜದಲ್ಲಿನ ಜಾತಿ, ಲಿಂಗ ತಾರತಮ್ಯ ಮತ್ತು ಮೌಢ್ಯತೆಗಳನ್ನು ಕಠೋರವಾಗಿ ವಿರೋಧಿಸುತ್ತಾ, ಸಮಾನತೆ ಮತ್ತು ಕಾಯಕ ನಿಷ್ಠೆಯನ್ನು ಬೋಧಿಸಿದ ಸಾಮಾಜಿಕ ಕ್ರಾಂತಿಯ ಹರಿಕಾರರಾಗಿದ್ದರು. ಧರ್ಮದ ಮೂಲ ಎಂಬ ಸಂದೇಶ ಸಾರುತ್ತಾ, ಸಾಮಾಜಿಕ ಜಾಗೃತಿ ಮೂಡಿಸುತ್ತಾ, ಸಮ ಸಮಾಜ ನಿರ್ಮಾಣಕ್ಕಾಗಿ ಶ್ರಮಿಸಿದವರು. ಸುಮಾರು 900 ವರ್ಷಗಳ ಹಿಂದೆಯೇ ಸಾಮಾಜಿಕ ಕಾನೂನು, ಸಂವಿಧಾನ, ಪ್ರಜಾಪ್ರಭುತ್ವ, ಸಮ ಸಮಾಜದ ನಿರ್ಮಾಣ, ಆರ್ಥಿಕತೆ, ಶಿಕ್ಷಣ ಮತ್ತು ಜ್ಞಾನ-ವಿಜ್ಞಾನದ ಪರಿಕಲ್ಪನೆಯಲ್ಲಿಯೇ ಅನುಭವ ಮಂಟಪವನ್ನೇ ಸ್ಥಾಪಿಸಿದ್ದರು.

**ಸಮಾನತೆಯ ಹರಿಕಾರರಾಗಿ ಬಸವಣ್ಣ**

ಅನುಭವ ಮಂಟಪ ಸ್ಥಾಪಿಸಿ, ಅಲ್ಲಮ ಪ್ರಭುಗಳು, ಮಡಿವಾಳ ಮಾಚಯ್ಯ, ನೂಲಿಯ ಚಂದಯ್ಯ, ಸಮಗಾರ ಹರಳಯ್ಯ, ಡೋಹರ ಕಕ್ಕಯ್ಯ, ಮಡಿವಾಳ ಮಾಚಯ್ಯ, ಮೋಳಿಗೆ ಮಾರಯ್ಯ, ಅಂಬಿಗೇರ ಚೌಡಯ್ಯ, ಅಕ್ಕ ಮಹಾದೇವಿ, ಆಯ್ದಕ್ಕಿ ಲಕ್ಕಮ್ಮ ಅವರಂತಹ ಎಲ್ಲ ಬಸವಾದಿ ಶರಣರೆಲ್ಲರೂ ಒಂದೆಡೆ ಸೇರಿಸಿ ಜಾತಿ, ಮತ, ಲಿಂಗಗಳ ಭೇದವನ್ನು ಅಳಿಸುತ್ತಾ ವೈಚಾರಿಕ ಚರ್ಚೆಗೆ ವೇದಿಕೆ ಕಲ್ಪಿಸಿದವರು. 'ದಯವೇ ಧರ್ಮದ ಮೂಲ' ಎಂಬ ವಚನದಿಂದ ಮಾನವ ಪ್ರೇಮ, ಪ್ರೀತಿಯ ಸ್ಪರ್ಶ ನೀಡಿದ ಬಸವಣ್ಣನವರು ದಯೆ ಕೇವಲ ಮಾನವ ಕುಲಕ್ಕೆ ಮಾತ್ರ ಸಿಮೀತವಾಗದೇ





ಸಕಲ ಚರಾಚರ ಪ್ರಾಣಿ-ಪಕ್ಷಿ ಸಂಕುಲಕ್ಕೂ ಅಗತ್ಯವೆಂದು ತಿಳಿಸಿಕೊಟ್ಟರು. 'ಇವನಾರವ, ಇವನಾರವ ಎನ್ನದೇ ಇವ ನಮ್ಮವ, ಇವ ನಮ್ಮವ, ಇವ ನಮ್ಮ ಮನೆಯ ಮಗನೆಂದೆನಿಸಯ್ಯ' ಎಂಬ ವಚನದಲ್ಲಿ ಸಾರುತ್ತಾ ಸಮಷ್ಠಿ ಭಾವದ ಮೂಲಕ ವಿಶ್ವಭ್ರಾತೃತ್ವದ ಸಮಾಜದ ಕನಸು ಕಂಡವರು ಬಸವಣ್ಣನವರು.

ಮೌಢ್ಯತೆಗಳ ಬಗ್ಗೆ ಜಾಗೃತಿ: 'ಕಲ್ಲನಾಗರ ಕಂಡರೆ ಹಾಲನೆರೆಯೆಂಬರು, ದಿಟ ನಾಗರ ಕಂಡರೆ ಕೊಲ್ಲೆಂಬರಯ್ಯ// ಎಂಬ ವಚನದ ಮೂಲಕ ಮೌಢ್ಯತೆಯ ಹೆಸರಿನಲ್ಲಿ ನಡೆಯುತ್ತಿದ್ದ ಡಾಂಭಿಕ ಆಚರಣೆಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿ ಹಸಿದು ಬಂದವರಿಗೆ ಅನ್ನದಾನ ಮಾಡಬೇಕು ಹೇಳುತ್ತಾ ಮೌಢ್ಯತೆಯನ್ನು ಅಳಿಸಲು ಶ್ರಮಿಸಿದವರು. ಜನರಿಗೆ ನಡೆ-ನುಡಿ, ಸತ್ಯ, ಸಚ್ಚಾರಿತ್ರ್ಯ, ಸನ್ನಡತೆ, ಸದ್ಭಾವ, ಸದಾಚಾರಗಳ ಬಗ್ಗೆ ಅರಿವು ಮೂಡಿಸಿ ಜೀವನದ ಸಾರ್ಥಕತೆ ಮತ್ತು ಸನ್ಮಾರ್ಗದ ದಾರಿ ತೋರಿಸಿದವರು. 'ಅರಿವೇ ಗುರು' ಮತ್ತು ತನ್ನರಿವೇ ತನಗೆ ಗುರುವಾಗಬೇಕು ಎಂಬುದನ್ನು ಅರಿತು ನಮ್ಮಲ್ಲಿ ಸ್ವ-ಅರಿವಿನ ಶಕ್ತಿ ಬೆಳೆಸಿಕೊಳ್ಳಬೇಕೆಂಬ ಮೌಲ್ವಿಕ ಸಂದೇಶ ನೀಡಿದರು. ಅವರ ಎಲ್ಲ ವಚನಗಳು, ತತ್ವ-ಸಿದ್ಧಾಂತ, ವಿಚಾರಧಾರೆಗಳನ್ನು ನಾವು ಪ್ರಸ್ತುತ ಸಮಾಜಕ್ಕೆ ತಿಳಿಸಿಕೊಡುವ ಅಗತ್ಯತೆಯಿದೆ. ಅವರ ದೃಷ್ಟಿಕೋನದಲ್ಲಿ ಸಮಾಜದಲ್ಲಿನ ಅಂಕು-ಡೊಂಕುಗಳನ್ನು ತಿದ್ದುವದಕ್ಕಿಂತ ಮೊದಲು ನಮ್ಮನ್ನು ನಾವು ತಿದ್ದಿಕೊಳ್ಳಬೇಕು ಅಂದಾಗ ಮಾತ್ರ ಇಡೀ ಸಮಾಜವು ಸುಧಾರಣೆಯಾಗುವುದು ಎಂದು ಹೇಳಿದ್ದಾರೆ.

ನಡೆ-ನುಡಿ ಒಂದಾಗಿರಬೇಕೆಂಬ ಸಂದೇಶ ಸಾರಿದವರು: ನುಡಿದರೆ ಮುತ್ತಿನ ಹಾರದಂತಿರಬೇಕು, ಮಾಣಿಕ್ಯದ ದೀಪ್ತಿ, ಸ್ಫಟಿಕದಂತೆ ಶುದ್ಧವಾಗಿರಬೇಕು, ನಾವು ಮಾತನಾಡುವ ಮಾತು ಮತ್ತು ನಮ್ಮ ನಡೆ ಅಥವಾ ನಡುವಳಿಕೆ ಒಂದೇ ಆಗಿರಬೇಕು. ನುಡಿದಂತೆ ನಡೆಯದಿದ್ದರೆ ಆ ಪರಶಿವ ಎಂದೂ ನಮ್ಮ ಮೆಚ್ಚಲಾರನು ಎಂದು ವಚನದಲ್ಲಿ ಬಹಳ ಮಾರ್ಮಿಕವಾಗಿ ವರ್ಣಿಸಿದ್ದಾರೆ. ಅಂತರಂಗ-ಬಹಿರಂಗದಲ್ಲಿ ಮನವು ಪರಿಶುದ್ಧವಾಗಿರಬೇಕು. ಕೇವಲ ಭಾಷಣ ಮಾಡಿದರೆ ಸಾಲದು. ಅದು ಆಚರಣೆ ಆಗಬೇಕು ಎಂದು ಸಾರಿದರು. 'ಕೂಡಲಸಂಗಮದೇವ' ಎನ್ನುವ ಅಂಕಿತನಾಮದೊಂದಿಗೆ ಸುಮಾರು 1500 ಕ್ಕೂ ಹೆಚ್ಚು ವಚನಗಳನ್ನು ರಚಿಸಿ, ಸಮಾಜದ ಅಂಕು-ಡೊಂಕುಗಳನ್ನು ತಿದ್ದುವ, ಸಮಾನತೆ, ಕಾಯಕ, ದಾಸೋಹ ಮತ್ತು ಭಕ್ತಿಮಾರ್ಗವನ್ನು ಬೋಧಿಸಿದವರು ಬಸವಣ್ಣನವರು.

**ಕೊನೆಯ ನುಡಿ**

ಬಸವಣ್ಣನವರು ಸಮಾನತೆಯ ಸಮಾಜದ ಕನಸು ಕಂಡು, ಮನುಷ್ಯರೆಲ್ಲರೂ ಒಂದೇ ಎಂದು ಸಂದೇಶ ಸಾರಿದ ಮಹಾಪುರುಷರು. ಬಸವಣ್ಣನವರ ವಚನಗಳು, ವಿಚಾರಧಾರೆ, ತತ್ವ-ಸಿದ್ಧಾಂತ ಮತ್ತು ಜೀವನ ಮೌಲ್ಯಗಳು ಇಂದಿಗೂ ಪ್ರಸ್ತುತವಾಗಿದ್ದು, ನಮ್ಮ ಯುವ ಪೀಳಿಗೆಗೆ ಅರ್ಥ-ೈಸುವ ಕಾರ್ಯ ನಡೆಯಬೇಕಾಗಿದೆ. ಪ್ರತಿವರ್ಷವೂ ಶಾಲೆ-ಕಾಲೇಜುಗಳಲ್ಲಿ ಬಸವಣ್ಣನವರ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸುತ್ತಾ, ವಿಶೇಷ ಉಪನ್ಯಾಸ, ಕಾರ್ಯಕ್ರಮ ಮತ್ತು ವಿಚಾರಗೋಷ್ಠಿಗಳನ್ನು



ಆಯೋಜಿಸಿ ವಿಶ್ವಗುರು ಬಸವಣ್ಣನವರ ವಚನಗಳ ಸಂದೇಶದ ಸಾರವನ್ನು ಜನರಿಗೆ ತಿಳಿಸಕೊಡಬೇಕಾಗಿರುವುದು ಇಂದಿನ ಅಗತ್ಯತೆಯಾಗಿದೆ. ಜಾತ್ಯಾತೀತ ಸಮಾಜದ ಕಲ್ಪನೆ, ಸ್ತ್ರೀ ಸಮಾನತೆಯ ಪ್ರತಿಪಾದನೆ, ಕಾಯಕ ದಾಸೋಹ, ಭಕ್ತಿಯೇ ಪ್ರಧಾನ ಎಂಬ ಶ್ರೇಷ್ಠ ಚಿಂತನೆಗಳನ್ನು ನಾವೆಲ್ಲರೂ ಜೀವನದಲ್ಲಿ ಅಳವಡಿಸಿಕೊಂಡು ವಿಶ್ವಭ್ರಾತೃತ್ವದ ಸಮಷ್ಠಿಭಾವದೊಂದಿಗೆ ವಸುದೈವ ಕುಟುಂಬಕಂ ಎಂಬ ತತ್ವದಡಿಯಲ್ಲಿ ನಾವೆಲ್ಲರೂ ಬದುಕೋಣ ಎನ್ನುವದು ನನ್ನ ಅಂಬೋಣ.



ಲೇಖನ
ಮಲ್ಲಪ್ಪ. ಸಿದ್ರಾಮ ಖೊದ್ನಾಪೂರ
(ತಿಕೋಟಾ)
ವಿಜಯಪುರ



# ಇತರರಿಗೆ ಆಸರೆಯಾಗಿ ಬದುಕದಿದ್ದರೆ ಅದು ನಶ್ವರದ ಬದುಕು

## ಕಲ್ಯಾಣದೇಶ್ವರ ಜಾತ್ರೆ । ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ । ಮಾಗಣಗೇರಿಯ ಏಕಾಕ್ಷರ ಶಿವಾಚಾರ್ಯ ಅಭಿಮತ




■ ಉದಯರಶ್ಮಿ ದಿನಪತ್ರಿಕೆ

ಸಿಂದಗಿ: ಮಾನವ ಇತರರಿಗೆ ಆಸರೆಯಾಗಿ ಬದುಕಬೇಕು. ಇತರರಿಗೆ ಬೇಸರವಾಗುವಂತಿದ್ದರೆ ಅದು ನಶ್ವರದ ಬದುಕಾಗಿರುತ್ತದೆ ಎಂದು ಯಡ್ರಾಮಿ ತಾಲೂಕಿನ ಸುಕ್ಷೇತ್ರ ಮಾಗಣಗೇರಿಯ ರುದ್ರಮುನೇಶ್ವರ ಹಿರೇಮಠದ ಪಟ್ಟಾಧ್ಯಕ್ಷ ಏಕಾಕ್ಷರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಸಿಂದಗಿ ತಾಲೂಕಿನ ಸುಕ್ಷೇತ್ರ ಹೊನ್ನಳ್ಳಿ ಬ್ರಹ್ಮದೇವನಮಡು ಗ್ರಾಮದ ಕಲ್ಯಾಣದೇಶ್ವರ ಜಾತ್ರಾ ಮಹೋತ್ಸವ ನಿಮಿತ್ಯ ಹಮ್ಮಿಕೊಂಡ ಶ್ರೀದೇವಿ ಹಾಗೂ 351 ಮುತ್ತೈದಿಯರಿಗೆ ಉಡಿ ತುಂಬುವ ಕಾಯಕ್ರಮದಲ್ಲಿ ಸಮ್ಮುಖ ವಹಿಸಿ ಮಾತನಾಡಿದ ಅವರು, ಮಾನವನ ಜನ್ಮದಿಂದ ಜಗತ್ತಿಗೆ ಉಪಯೋಗವಾಗಬೇಕು. ಇದಕ್ಕೆ ನಿದರ್ಶನವೇ ಶ್ರೀಮಠದ ಲಿಂಗೈಕ್ಯ ವೀರಘಂಟಯ್ಯ ಸ್ವಾಮೀಜಿ. ಇವರ ಸತ್ಯ ಸನ್ಮಾರ್ಗವು ಮನುಕುಲಕ್ಕೆ ದಾರಿದೀಪವಾಗಿದೆ. ಸಂಪತ್ತಿನ ಬೆನ್ನು ಹತ್ತದೇ ಸದ್ವಿಚಾರಗಳು, ನಡೆ ನುಡಿಯಲ್ಲಿ ಭಿನ್ನವಿಲ್ಲದಂತೆ ಬದುಕಿದ್ದೇ ಆದಲ್ಲಿ ದೈವಾನುಗ್ರಹ ಸದಾ ಇರುತ್ತದೆ. ವಿಕೃತಿಯಾಗಿ ಯಾರು ಬದುಕುತ್ತಾರೋ ಅವರು ಮಣ್ಣಲ್ಲಿ ಮಣ್ಣಾಗುತ್ತಾರೆ. ಇಂತಹ ಬದುಕು ನಿರರ್ಥಕವಾಗಿರುತ್ತದೆ. ಈ ಬದುಕು ಎಂಬ ಮೂರಕ್ಷರದ ಪದಕ್ಕೆ ಸದ್ಗುರುವಿನ ಆಶೀರ್ವಾದ ಇರಬೇಕು. ಭಕ್ತ ವೃಂದವು ಸತ್ಸಂಗದಲ್ಲಿ ನಿರತರಾಗಿರಬೇಕು. ವಿಕೃತಿ ಬದುಕು ತ್ಯಜಿಸಿ ಸುಸಂಸ್ಕೃತ ಬದುಕು ಸಾಗಿಸುವುದು ಅಗತ್ಯವಾಗಿದೆ ಎಂದರು.

ಈ ವೇಳೆ ಯಂಕಂಚಿ ಕುಂಟೋಜಿ ಹಿರೇಮಠದ ಅಭಿನವ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಪ್ರಸ್ತುತ ಕಾಲಘಟ್ಟದಲ್ಲಿ ಮಾನವೀಯತೆ ನಶಿಸುತ್ತಿದೆ. ಹಿರಿಯರನ್ನು ಅಗೌರವದಿಂದ ಕಾಣುವ ಮನುಷ್ಯರೇ ಹೆಚ್ಚಾಗುತ್ತಿದ್ದಾರೆ. ಪೂಜ್ಯನೀಯ ತಂದೆ ತಾಯಿಯರನ್ನು ಗೌರವಿಸುವವರೇ ಪುಣ್ಯವಂತರಾಗುತ್ತಾರೆ. ಪ್ರಾಣಿ ಪ್ರೀತಿಯ ಜೊತೆಗೆ ಮಾನವ ಸಂಬಂಧಗಳಿಗೂ ಬೆಲೆ ಇರಬೇಕು. ಹಿರಿಯರನ್ನು ವೃದ್ಧಾಶ್ರಮಕ್ಕೆ ಕಳಿಸುವ ದುಸ್ಥಿತಿ ಯಾರಿಗೂ ಬರಬಾರದು. ಭಕ್ತರು ಸದಾ ಶ್ರೀಮಠದ ಮೇಲೆ ಕಾಳಜಿ ಸೇವಾ ಮನೋಭಾವ ಹೊಂದಬೇಕು. ಸದ್ಗುಣಗಳಿಂದ ಜೀವನ ನಡೆಸುವ ಪ್ರತಿಯೋರ್ವರಿಗೂ ಗುರುವಿನ ಕೃಪಕಟಾಕ್ಷ ಇರುತ್ತದೆ ಎಂದರು. ಕಾರ್ಯಕ್ರಮದಲ್ಲಿ ಚಾಮನಾಳದ ಗುರಣ್ಣಸಾಹು ಅಂಗಡಿ ದಂಪತಿಗಳ ಹಾಗೂ ಪತ್ರಕರ್ತ ಮಲ್ಲಿಕಾರ್ಜುನ ಕೆಂಭಾವಿ ಅವರನ್ನು ಶ್ರೀಮಠದಿಂದ ಸನ್ಮಾನಿಸಿ ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ 351ಕ್ಕೂ ಅಧಿಕ ಮುತ್ತೈದೆಯರಿಗೆ ಉಡಿ ತುಂಬಲಾಯಿತು.

ಈ ವೇಳೆ ಶ್ರೀಮಠದ ಒಡೆಯ ಕಲ್ಯಾಣದಯ್ಯ ವೀರಘಂಟಯ್ಯ ಗದ್ದುಗೆಮಠ ಸ್ವಾಮೀಜಿ, ರಾಜೇಶ್ರೀ ಅಮ್ಮನವರು, ಚನ್ನಮಲ್ಲಯ್ಯ ಹಿರೇಮಠ, ಸೋಮನಗೌಡ ಚಿಂಚೊಳ್ಳಿ, ಶಿವುಸಾಹ ಅಂಗಡಿ, ಪ್ರವಚನಕಾರ ಡಾ.ಶಿವಲಿಂಗಯ್ಯ ಶರಣರು ಪುರಾಣಿಕಮಠ, ಶಹಾಪೂರ ಮನಗೂಳಿ ಆಸ್ಪತ್ರೆಯ ಡಾ.ಶಂಭುಲಿಂಗ ಮನಗೂಳಿ, ಮಲ್ಹಾರಾವ್ ಕುಲಕರ್ಣಿ, ಗುರುಲಿಂಗಪ್ಪಸಾಹು ಸಜ್ಜನ, ಎಸ್.ವೈ. ಅಮರಗೋಳ, ಪವನ ಕುಲಕರ್ಣಿ ಚಾಮನಾಳ, ಅರವಿಂದಸಾಹು ಕುರಳಗೇರಾ ಸೇರಿದಂತೆ ಹಲವರಿದ್ದರು.

# ನ್ಯಾಯದಾನ ಪ್ರಕ್ರಿಯೆಯಲ್ಲಿ ಮಾನವೀಯತೆ, ಸಂವೇದನಾ ಶೀಲತೆ ಒಳಗೊಂಡಿರಬೇಕು: ಸಿಜೆಐ ಸೂರ್ಯಕಾಂತ್

ಬೆಂಗಳೂರು: ನ್ಯಾಯದಾನ ಪ್ರಕ್ರಿಯೆಯಲ್ಲಿ ನ್ಯಾಯಾಧೀಶರ ಪಾತ್ರ ಕೇವಲ ಕಾನೂನು ಜ್ಞಾನಕ್ಕೆ ಮಾತ್ರಸೀಮಿತವಾಗಿದೆ.ಮಾನವೀಯತೆ,ಸಂವೇದನೆ ಮತ್ತು ಜವಾಬ್ದಾರಿಯನ್ನು ಒಳಗೊಂಡಿರಬೇಕು ಎಂದು ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ತಿಳಿಸಿದರು.

ಬೆಂಗಳೂರಿನ ಜಿಕೆವಿಕೆಯ ಡಾ. ಬಾಬು ರಾಜೇಂದ್ರ ಪ್ರಸಾದ್ ಅಂತಾರಾಷ್ಟ್ರೀಯ ಸಭಾಂಗಣದಲ್ಲಿ ನಡೆದ "ಕೃತಕ ಬುದ್ಧಿಮತ್ತೆಯ ಯುಗದಲ್ಲಿ ನ್ಯಾಯಾಂಗವನ್ನು ಮರುರೂಪಿಸುವುದು" ವಿಷಯದ ಕುರಿತ ನ್ಯಾಯಾಂಗ ಅಧಿಕಾರಿಗಳ 22ನೇ ದ್ವೈವಾರ್ಷಿಕ ರಾಜಮಟ್ಟದ ಸಮ್ಮೇಳನದಲ್ಲಿ ಮಾತನಾಡಿದ ಅವರು, ನ್ಯಾಯಾಲಯಕ್ಕೆ ಬರುವ ಪ್ರತಿಯೊಂದ ಪ್ರಕರಣವೂ ಮಾನವೀಯ ಅಂಶಗಳನ್ನು ಹೊಂದಿದ್ದು, ನ್ಯಾಯನಿರ್ಣಯವು ಕೇವಲ ಕಾನೂನು ಅನ್ವಯಿಸುವ ಕಾರ್ಯಮಾತ್ರವಲ್ಲದೆ. ಬದುಕಿನ ನೈಜತೆಗಳೊಂದಿಗೆ ಸಂವಾದವಾಗಿರಬೇಕು ಎಂದು ನ್ಯಾಯಾಂಗ ಅಧಿಕಾರಿಗಳಿಗೆ ಸಲಹೆ ನೀಡಿದರು.

ಸಾಮಾನ್ಯ ನಾಗರಿಕರಿಗೆ ನ್ಯಾಯಾಂಗ ವ್ಯವಸ್ಥೆ ಎಂದರೆ ವಿಚಾರಣಾ ನ್ಯಾಯಾಲಯಗಳಾಗಿರಲಿದ್ದು, ಈ ನ್ಯಾಯಾಲಯಗಳಲ್ಲಿ ಸಂವಿಧಾನದ ಮೌಲ್ಯಗಳು ಜೀವಂತವಾಗಿದ್ದು, ನ್ಯಾಯಾಂಗದ ವ್ಯವಸ್ಥೆಯ ಮೇಲಿನ ನಂಬಿಕೆಯನ್ನು ಮತ್ತಷ್ಟು ಬಲಪಡಿಸಬೇಕು ಎಂದು ತಿಳಿಸಿದರು.

ಅಲ್ಲದೆ, ನ್ಯಾಯಾಂಗದ ಭವಿಷ್ಯವು ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವಲ್ಲಿ ಮಾತ್ರವಲ್ಲ, ತನ್ನ ಮೂಲಭೂತ ಮೌಲ್ಯಗಳನ್ನು ಕಾಪಾಡಿಕೊಳ್ಳುವ ಸಾಮರ್ಥ್ಯದಲ್ಲಿದ್ದು, ನ್ಯಾಯವು ನ್ಯಾಯಸಮ್ಮತ, ಸುಲಭ ಮತ್ತು ಮಾನವೀಯವಾಗಿರಬೇಕೆಂಬುದು ಅಂತಿಮ ಗುರಿಯಾಗಿರಬೇಕು ಎಂದರು.

ಎಐಗೆ ಮಾನವೀಯ ತೀರ್ಮಾನ ಶಕ್ತಿ ಇಲ್ಲ: ಕೃತಕ ಬುದ್ಧಿಮತ್ತೆಯ ಬಳಕೆ ನ್ಯಾಯಾಂಗದಲ್ಲಿ ಕಾರ್ಯಕ್ಷಮತೆಯನ್ನು ಹೆಚ್ಚಿಸುವ ಸಾಮರ್ಥ್ಯ ಹೊಂದಿದೆ. ಆದರೆ, ಅದಕ್ಕೆ ಮಾನವೀಯ ತೀರ್ಮಾನಶಕ್ತಿ, ನೈತಿಕತೆ ಮತ್ತು ಸಾಮಾಜಿಕ ಮೌಲ್ಯಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿರುವುದಿಲ್ಲ. ಆದ್ದರಿಂದ, ಅದನ್ನು ಅತಿಯಾಗಿ ಅವಲಂಬಿಸುವುದು ನ್ಯಾಯಾಂಗದ ಸ್ವಾತಂತ್ರ್ಯ ಮತ್ತು ಗುಣಮಟ್ಟಕ್ಕೆ ಹಾನಿಯಾಗಬಹುದು. ಹೀಗಾಗಿ ಅದರ ಮಿತಿಗಳನ್ನು ಗಮನದಲ್ಲಿಟ್ಟು ಬಳಕೆ ಮಾಡಬೇಕು ಎಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಎಐ ಬಳಕೆ ಮಾಡಿ ತಪ್ಪು ಮಾಹಿತಿಯನ್ನೊಳಗೊಂಡ ಅರ್ಜಿಗಳು, ಕೃತಕ ಉಲ್ಲೇಖಗಳು ಮತ್ತು ಅಸಂಬದ್ಧ ವಾದಗಳು ಹೆಚ್ಚುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಇವು ನ್ಯಾಯಾಂಗದ ಸಮಯವನ್ನು ವ್ಯರ್ಥಗೊಳಿಸುವುದಲ್ಲದೆ, ನಿಜವಾದ ಪ್ರಕರಣಗಳ ವಿಚಾರಣೆಗೆ ಅಡ್ಡಿಯಾಗುತ್ತವೆ. ಹೀಗಾಗಿ, ಕೃತಕ ಬುದ್ಧಿಮತ್ತೆಯನ್ನು ಉಪಕರಣವಾಗಿ ಮಾತ್ರ ಬಳಸಬೇಕು, ನ್ಯಾಯಾಂಗಕ್ಕೆ ಪರ್ಯಾಯವಾಗಿ ಅಲ್ಲ. ನ್ಯಾಯನಿರ್ಣಯವು ಮಾನವೀಯ ತರ್ಕ, ಅನುಭವ ಮತ್ತು ಸಂವಿಧಾನ ಮೌಲ್ಯಗಳ ಆಧಾರದಲ್ಲಿಯೇ ನಡೆಯಬೇಕು ಎಂದು ಎಂದು ಅವರು ವಿವರಿಸಿದರು.

ಅಲ್ಲದೆ, ಎಐ ಬಳಕೆಯ ಕುರಿತು ಭಯಪಡುವ ಅಗತ್ಯವಿಲ್ಲ. ಆದರೆ ಅದನ್ನು ಜಾಗರೂಕತೆಯಿಂದ, ವಿಚಾರಪೂರ್ಣವಾಗಿ ಬಳಸಬೇಕು. ನ್ಯಾಯಾಧೀಶರ ಸ್ವತಂತ್ರ ಚಿಂತನೆ ಯಾವಾಗಲೂ ಮೇಲುಗೈ ಸಾಧಿಸಬೇಕು ಎಂದು ಅವರು ಇದೇ ವೇಳೆ ಸಲಹೆ ನೀಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿ, ದಕ್ಷಿಣ ಭಾರತದಲ್ಲಿ ಸರ್ವೋಚ್ಚ ನ್ಯಾಯಾಲಯದ ಪೀಠ ಸ್ಥಾಪನೆಯಾದರೆ ನ್ಯಾಯವನ್ನು ಖಾತ್ರಿಪಡಿಸುವ ನಿಟ್ಟಿನಲ್ಲಿ ಬಹು ದೊಡ್ಡ ಹೆಜ್ಜೆಯನ್ನು ಇರಿಸಿದಂತಾಗುತ್ತದೆ. ಪ್ರಸಕ್ತ ಕಾಲಘಟ್ಟದಲ್ಲಿ ಕಾನೂನು ಮತ್ತು ತಂತ್ರಜ್ಞಾನವು ಪ್ರತ್ಯೇಕ ಕ್ಷೇತ್ರಗಳಾಗಿ ಉಳಿದಿಲ್ಲ. ಈಗ ಮುಂದುವರೆದು ನ್ಯಾಯಾಂಗ ಕ್ಷೇತ್ರಕ್ಕೆ ಕೃತಕ ಬುದ್ಧಿಮತ್ತೆಯ ಪ್ರವೇಶವಾಗಿದೆ. ಅದರಿಂದಾಗಿ ಆಡಳಿತ, ಹಕ್ಕುಗಳು ಮತ್ತು ನ್ಯಾಯದ ಸ್ವರೂಪವನ್ನು ರೂಪಿಸುವ ಪರಸ್ಪರ ಸಂಬಂಧ ಹೊಂದಿರುವ ಶಕ್ತಿಗಳ ನಡುವೆ ನಿರ್ಣಾಯಕ ಹಂತದಲ್ಲಿ ನಾವಿದ್ದೇವೆ. ನಾವು ಪುರಾವೆಗಳನ್ನು ಹೇಗೆ ಅರ್ಥೈಸಿಕೊಳ್ಳುತ್ತೇವೆ, ಸತ್ಯಗಳನ್ನು ಹೇಗೆ ಅರ್ಥ ಮಾಡಿಕೊಳ್ಳುತ್ತೇವೆ ಮತ್ತು ನಿರ್ಧಾರಗಳನ್ನು ಹೇಗೆ ತಲುಪುತ್ತೇವೆ ಎಂಬುದನ್ನು ಪ್ರಶ್ನಿಸುವ ಪರಿವರ್ತನಾ ಶಕ್ತಿಯಾಗಿ ಕೃತಕ ಬುದ್ಧಿಮತ್ತೆ ಹೊರಹೊಮ್ಮುತ್ತಿದೆ ಎಂದು ಹೇಳಿದರು.

ಕೃತಕ ಬುದ್ಧಿಮತ್ತೆಯ ಸಹಾಯದಿಂದ ತ್ವರಿತ ಕಾನೂನು ಸಂಶೋಧನೆ, ಪ್ರಕರಣಗಳ ಇತ್ಯರ್ಥಕ್ಕೆ ಸಂಬಂಧಿಸಿದಂತೆ ಸುಧಾರಿತ ನಿರ್ವಹಣೆ ವ್ಯವಸ್ಥೆಗಳ ಮೂಲಕ ಬಾಕಿ ಇರುವ ಪ್ರಕರಣಗಳನ್ನು ಕಡಿಮೆ ಮಾಡುವ ಸಾಧ್ಯತೆ ಇದೆ. ಆದರೂ, ಇದೇ ಸಮಯದಲ್ಲಿ ನ್ಯಾಯಾಂಗ ವ್ಯವಸ್ಥೆಯಲ್ಲಿ ಕೃತಕ ಬುದ್ಧಿಮತ್ತೆಯನ್ನು ಅಳವಡಿಸಿಕೊಳ್ಳುವುದರ ಕುರಿತು ಆಳವಾದ ಕಳವಳಗಳು ಮೂಡದೇ ಇರಲಾರದು ಎಂದರು.

# ಏ.22ರಂದು ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಹೆಸ್ಕಾಂ ವಿಯಪುರ ಇವರಿಂದ ಏಪ್ರಿಲ್ 22 ರಂದು ಬಬಲೇಶ್ವರ ಉಪ ವಿಭಾಗದ ಇಐಪಿ ಪೀಡರ್, ಏ.23 ರಂದು ಗ್ರಾಮೀಣ ವಿಜಯಪುರ ಉಪ ವಿಭಾಗದ ಇಐಪಿ ಪೀಡರ್‌ಗಳು ಹಾಗೂ ಏ.24ರಂದು ತಿಕೋಟಾ ಉಪ ವಿಭಾದ ಇಐಪಿ ಪೀಡರ್‌ಗಳ ನಿರ್ವಹಣಾ ಕಾರ್ಯ ಕೈಗೊಳ್ಳಲಾಗುತ್ತಿದ್ದು, ಅಂದು ಬೆಳಿಗ್ಗೆ 9 ರಿಂದ ಸಂಜೆ 6 ಗಂಟೆಯವರೆಗೆ ಇಐಪಿ ಮಾರ್ಗಗಳಿಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ. ಕಾರಣ ಗ್ರಾಹಕರು ಹೆಸ್ಕಾಂನೊಂದಿಗೆ ಸಹಕರಿಸುವಂತೆ ಹೆಸ್ಕಾಂ ವಿಯಪುರದ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಹೆಚ್ ಡಿ ಕೋಟೆ ಸ್ಮಾರ್ಟ್ ಸಿಟಿ ಮಾಡಲು ಶಾಸಕ ಅನಿಲ್ ಚಿಕ್ಕಮಾದು ಪ್ರಯತ್ನ

# ಹ್ಯಾಂಡ್ ಪೋಸ್ಟ್ ಟು ಕೋಟೆ ಜೋಡಿ ರಸ್ತೆ– ಹೈಟೆಕ್ ಪಾರ್ಕ್ ನಿರ್ಮಾಣ

■ ಉದಯರಶ್ಮಿ ದಿನಪತ್ರಿಕೆ



ಹೆಚ್.ಡಿ.ಕೋಟೆ: ವನ–ಜಲ ಸಂಪತ್ತಿನ ಜೊತೆಗೆ ಸಫಾರಿಯಿಂದ ವಿದೇಶಿ ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿರುವ ಹೆಚ್ ಡಿ ಕೋಟೆ ತಾಲೂಕಿನಲ್ಲಿ ಜನರ ಜೀವನ ಶೈಲಿ ಇನ್ನು ಬದಲಾಗಿಲ್ಲ. ಗ್ರಾಮೀಣ ಪ್ರದೇಶಗಳೇ ಸುತ್ತುವರೆದಿರುವ ಹಿನ್ನೆಲೆ ಪಟ್ಟಣ ಕೂಡ ಹಳ್ಳಿ ವಾತಾವರಣದಿಂದ ಹೊರಬಂದಿಲ್ಲ. ಇದನ್ನು ಮನಗಂಡಿರುವ ಶಾಸಕ ಅನಿಲ್ ಚಿಕ್ಕಮಾದು ಪಟ್ಟಣಕ್ಕೆ ಆಧುನಿಕ ಟಚ್ ಕೊಡಲು ಮುಂದಾಗಿದ್ದಾರೆ. ಅದರ ಮೊದಲ ಹೆಜ್ಜೆಯಾಗಿ, ಹೈಟೆಕ್ ಪಾರ್ಕ್ ನಿರ್ಮಾಣಕ್ಕೆ ಮುಂದಾಗಿದ್ದಾರೆ.

ಮಂಗಳವಾರದ ಸಂತೆಗಷ್ಟೇ ಸೀಮಿತವಾಗಿದ್ದ ಪಟ್ಟಣದ ಸಂತೇಮಾಳ ಮೈದಾನ ಸ್ಥಳಾಂತರ ಮಾಡಿ, ಅಲ್ಲಿ ಪಾರ್ಕ್ ಮಾಡುವ ಆಸೆಯಿದ್ದು, ಅಂದಾಜು 10 ಕೋಟಿ ವೆಚ್ಚದಲ್ಲಿ ಕಾಮಗಾರಿ ಪ್ರಾರಂಭಿಸುವುದಾಗಿ ಶಾಸಕ ಅನಿಲ್ ಚಿಕ್ಕಮಾದು ಹೇಳಿದರು. ಪಟ್ಟಣದ ವಿವಿಧೆಡೆ ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿ 6ವರೆ ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಗುದ್ದಲಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಹೆಚ್ ಡಿ ಕೋಟೆ ಪಟ್ಟಣವನ್ನು ದಾವಣಗೆರೆ, ಹುಬ್ಬಳಿ–ಧಾರವಾಡ, ತುಮಕೂರು ಮಾದರಿಯಲ್ಲಿ ಸ್ಮಾರ್ಟ್ ಸಿಟಿ ಮಾಡುವುದಾಗಿ ಆಸೆ ಇದೆ. ಈ ಸಂಬಂಧ ಮೈಸೂರು ಜಿಲ್ಲಾಧಿಕಾರಿ ಲಕ್ಷ್ಮಿಕಾಂತ್ ರೆಡ್ಡಿ ಜೊತೆ ಮಾತನಾಡಿದ್ದೇನೆ. ಆದಷ್ಟು ಬೇಗ ಸ್ಮಾರ್ಟ್ ಸಿಟಿ ಯೋಜನಾದಿಕಾರಿಗಳನ್ನು ಕೋಟೆಗೆ ಕರೆಯಿಸಿ ಬ್ಲೂ ಪ್ರಿಂಟ್ ರೆಡಿ ಮಾಡಿಸಲಾಗುವುದು. ಹೆಚ್ಚಿನ ಅನುದಾನ ಕೊಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ಕೊಟ್ಟಿದ್ದಾರೆ. ಹೀಗಾಗಿ ಶೀಘ್ರದಲ್ಲೇ ಪಾರ್ಕ್ ಉದ್ಯಾನವನ ಕಾಮಗಾರಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ಶಾಸಕ ಅನಿಲ್ ಚಿಕ್ಕಮಾದು ಹೇಳಿದರು. ಈ ವೇಳೆ ಏಜಾಜ್ ಪಾಷಾ, ಎಚ್.ಸಿ. ನರಸಿಂಹಮೂರ್ತಿ, ತಾ.ಪಂ. ಮಾಜಿ ಸದಸ್ಯ ಎಚ್ ಟಿ ಗಿರಿಗೌಡ, ನಾಗನಹಳ್ಳಿ ಪ್ರದೀಪ್, ಎಂ ಸಿ ದೊಡ್ಡನಾಯಕ, ತಾಲೂಕು ಮಹಿಳಾ ಘಟಕದ ಅಧ್ಯಕ್ಷೆ ಸೌಮ್ಯ ಮಂಜುನಾಥ್, ರಾಜು ವಿಶ್ವಕರ್ಮ ಸೇರಿದಂತೆ ಹಲವರಿದ್ದರು.

## ಬಿ.ಎಲ್.ಡಿ.ಇ ಸಂಸ್ಥೆಯ ಎಸ್.ಬಿ ಕಲಾ ಮತ್ತು ಕೆ.ಸಿ.ಪಿ ವಿಜ್ಞಾನ ಮಹಾವಿದ್ಯಾಲಯದಲ್ಲಿ ವಿದ್ಯಾರ್ಥಿ ವೇತನ ಜಾಗೃತಿ ಅಭಿಯಾನ

# ಸರ್ಕಾರಿ ಯೋಜನೆಗಳಿಂದ ಬದುಕು ರೂಪಿಸಿಕೊಳ್ಳಿ :ಇಂಡಿ

■ ಉದಯರಶ್ಮಿ ದಿನಪತ್ರಿಕೆ




ವಿಜಯಪುರ: ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದ, ಶೋಷಿತ ಸಮುದಾಯಗಳಿಗೆ ಶಿಕ್ಷಣ ನೀಡಲು ಸರ್ಕಾರ ಅನೇಕ ಯೋಜನೆಗಳನ್ನು ಜಾರಿಗೆ ತಂದಿದೆ ವಿದ್ಯಾರ್ಥಿಗಳು ಅವುಗಳನ್ನು ಬಳಸಿಕೊಂಡು ಬದುಕು ರೂಪಿಸಿಕೊಳ್ಳಬೇಕು ಎಂದು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಬಿ.ಜೆ. ಇಂಡಿ ಹೇಳಿದರು.

ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಎಸ್.ಬಿ. ಕಲಾ ಮತ್ತು ಕೆ.ಸಿ.ಪಿ ವಿಜ್ಞಾನಿ ಮಹಾವಿದ್ಯಾಲಯದಲ್ಲಿ ಐಕ್ಯೂಎಸಿ, ಎಸ್ಸಿ, ಎಸ್ಟಿ, ಓಬಿಸಿ ಹಾಗೂ ಮೈನಾರಿಟಿ ಸೆಲ್ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ವಿದ್ಯಾರ್ಥಿ ವೇತನ ಜಾಗೃತಿ ಅಭಿಯಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಆರ್ಥಿಕವಾಗಿ ಬಹಳಷ್ಟು ಕುಟುಂಬಗಳು ಮಕ್ಕಳ ಶಿಕ್ಷಣ ಕೊಡಿಸಲಾರದಷ್ಟು ಬಡತನ ಎದುರಿಸುತ್ತಿವೆ. ಸರ್ಕಾರ ಅಂತಹ ಮಕ್ಕಳ ಶೈಕ್ಷಣಿಕ ಬದುಕು ಉಜ್ವಲಗೊಳಿಸಲು ಶಿಷ್ಯ ವೇತನ ಜಾರಿಗೊಳಿಸಿದೆ. ಶಿಕ್ಷಣಕ್ಕೆ ಬಡತನ ಅಡ್ಡಿಯಾಗದು. ನಾವು ನಮ್ಮ ಗುರಿ ಮತ್ತು ಸಾಧನೆ ಕಡೆಗೆ ಗಮನ ಕೊಡಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರಲ್ಲದೆ, ನಮ್ಮಲ್ಲಿ ಬರುವ ಎಸ್ಸಿ ಎಸ್ಟಿ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ತರಬೇತಿ ಪಡೆಯಲು ಸಹಿತ ಸರ್ಕಾರ ಯೋಜನೆ ರೂಪಿಸಿದೆ ಎಂದರು.

ಈ ವೇಳೆ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಅನೀಲ ಬಿ. ನಾಯಕ ಮಾತನಾಡಿ, ವಿಜ್ಞಾನ–ತಂತ್ರಜ್ಞಾನ, ಆರ್ಥಿಕ ಹಾಗೂ ಸಾಮಾಜಿಕ ಬೆಳವಣಿಗೆಗೆ ಶಿಕ್ಷಣ ಒಂದು ಪ್ರಮುಖ ಸಾಧನವಾಗಿದೆ ಅದರಂತೆ ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ಹಲವಾರು ಯೋಜನೆಗಳು ಜಾರಿಯಾಗಿವೆ ಎಂದರು. ಈ ವೇಳೆಯಲ್ಲಿ ಬಾಗಲಕೋಟೆಯ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಸಹಾಯಕ ಅಧಿಕಾರಿ ಗುರುನಾಥ ಎಮ್.ಮಸಳಿ ಮಾತನಾಡಿದರು.

ಈ ಸಂದರ್ಭದಲ್ಲಿ ಐಕ್ಯೂಎಸಿ ಸಂಯೋಜಕ ಡಾ.ಪಿ. ಎಸ್.ಪಾಟೀಲ, ಎಸ್ಸಿ–ಎಸ್ಟಿ, ಸೆಲ್ ಮುಖ್ಯಸ್ಥ ಡಾ.ಪ್ರದೀಪ. ಚವಾಣ್, ಹಾಗೂ ಒಬಿಸಿ ಮೈನಾರಿಟಿ ಸೆಲ್ ಮುಖಸ್ಥ ಡಾ. ಎಸ್.ಡಿ.ಲಮಾಣಿ, ಪ್ರೊ.ಪ್ರಭಾವತಿ ತಳವಾರ, ಪ್ರೊ.ಬಿಲಾಲ್ ಪಾನಿಬಂಧ, ಡಾ.ಧರ್ಮಗುರು ಪ್ರಸಾದ್, ಪ್ರೊ.ಪವನ್ ಮಹೀಂದ್ರಕರ, ಮಲಿಕ್ ಎಲ್.ಜಮಾದಾರ, ಪ್ರೊ.ಎಸ್. ವೈ.ಅಂಗಡಿ, ಪಲ್ಲವಿ ಜಾಗಿರದಾರ ಮಹಾವಿದ್ಯಾಲಯದ ಬೋಧಕ, ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಬಿ.ಎಲ್.ಡಿ.ಇ ಸಂಸ್ಥೆಯ ಎಸ್.ಬಿ ಕಲಾ ಮತ್ತು ಕೆ.ಸಿ.ಪಿ ವಿಜ್ಞಾನ ಮಹಾವಿದ್ಯಾಲಯದಲ್ಲಿ ವಿಶ್ವ ಪಾರಂಪರಿಕ ದಿನಾಚರಣೆ

# ನಮ್ಮ ಪರಂಪರೆ ಸಂರಕ್ಷಿಸುವ ಜವಾಬ್ದಾರಿ ನಮ್ಮದು :ಡಾ.ಮಯೂರ

■ ಉದಯರಶ್ಮಿ ದಿನಪತ್ರಿಕೆ




ವಿಜಯಪುರ: ನಮ್ಮ ಪರಂಪರೆ ಐತಿಹಾಸಿಕ ಸ್ಮಾರಕಗಳ ಇತಿಹಾಸ, ವೈವಿಧ್ಯತೆಯನ್ನು ಕಾಪಾಡಿಕೊಳ್ಳುವದು ಅಲ್ಲದೆ ಪಾರಂಪರಿಕ ತಾಣಗಳನ್ನು ರಕ್ಷಣೆ ಮಾಡುವ ಜವಾಬ್ದಾರಿ ನಮ್ಮ ಮೇಲಿದೆ ಎಂದು ಚಡಚಣ ಶ್ರೀ ಸಂಗಮೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಇತಿಹಾಸ ವಿಭಾಗದ ಮುಖಸ್ಥರಾದ ಡಾ. ಮಯೂರ ಕುದರಿ ಹೇಳಿದರು.

ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಎಸ್.ಬಿ. ಕಲಾ ಮತ್ತು ಕೆ.ಸಿ.ಪಿ ವಿಜ್ಞಾನಿ ಮಹಾವಿದ್ಯಾಲಯದಲ್ಲಿ ಐಕ್ಯೂಎಸಿ, ಹೆರಿಟೇಜ್ ಕ್ಲಬ್ ಹಾಗೂ ಇತಿಹಾಸ ವಿಭಾಗದ ಸಹಯೋಗದಲ್ಲಿ ಏ.18 ರಂದು ವಿಶ್ವ ಪಾರಂಪರಿಕ ದಿನಾಚರಣೆ ಅಂಗವಾಗಿ 'ಕರ್ನಾಟಕದ ಪಾರಂಪರಿಕ ಸ್ಮಾರಕಗಳ ಮಹತ್ವ' ಎಂಬ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡಿದ ಅವರು, ಪುರಾತತ್ವ ಇಲಾಖೆಯಡಿಯಲ್ಲಿನ ಹಲವಾರು ವಿಶ್ವ ಪಾರಂಪರಿಕ ತಾಣಗಳು ಇದ್ದು ಅವುಗಳನ್ನು ಸಂರಕ್ಷಿಸುವ ಜವಾಬ್ದಾರಿ ನಮ್ಮದಾಗಿದೆ, ಪಾರಂಪರಿಕ ತಾಣಗಳು ಪೂರ್ವಜರ ವಿಚಾರಗಳನ್ನು ಪಸ್ತುತಪಡಿಸುತ್ತಿವೆ ಎಂದರು. ಈ ವೇಳೆಯಲ್ಲಿ ಇತಿಹಾಸ ವಿಭಾಗದ ಮುಖಸ್ಥರಾದ ಪ್ರೊ.ಐ.ಎಸ್. ಹೂಗಾರ ಸ್ವಾಗತಿಸಿದರು, ಹೆರಿಟೇಜ್ ಕ್ಲಬ್ ಸಂಯೋಜಕ ಡಾ.ಗಿರೀಶ ಹನಮರೆಡ್ಡಿ ಪರಿಚಯಿಸಿದರು.

ಈ ಸಂದರ್ಭದಲ್ಲಿ ಪ್ರಾಚಾರ್ಯ ಡಾ.ಅನೀಲ.ಭಿ.ನಾಯಕ, ಐಕ್ಯೂಎಸಿ ಸಂಯೋಜಕ ಡಾ.ಪಿ.ಎಸ್.ಪಾಟೀಲ, ಡಾ.ತರನ್ನುಮ್ ಜಬೀನ ಖಾನ್, ಪ್ರೊ. ಎಸ್.ವೈ.ಅಂಗಡಿ, ಮಲಿಕ್ ಎಲ್. ಜಮಾದಾರ, ಅಕ್ಷಯ ಜನಾಯ, ಡಾ.ಸುಮಿ ಚೋಪಡೆ, ಲಕ್ಷ್ಮೀ ವಾಲಿ, ಪ್ರೊ.ಶೋಭಾ ರುದ್ರಗೌಡರ್, ಪ್ರೊ.ಸಿ.ಎನ್.ಕುನ್ನೂರ, ಡಾ.ಪಲ್ಲವಿ ಪಟಾಟೆ ಮಹಾವಿದ್ಯಾಲಯದ ಬೋಧಕ, ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಪ್ರತಿಷ್ಠಿತ ಶಾಲೆ ಪ್ರವೇಶಕ್ಕೆ ಆನ್ ಲೈನ್ ಮೂಲಕ ಅರ್ಜಿ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಜಿಲ್ಲೆಯ ಪ್ರತಿಷ್ಠಿತ ಶಾಲೆಗಳಿಗೆ 6ನೇ ತರಗತಿ ಪ್ರವೇಶ ಕಲ್ಪಿಸಲು ಪರಿಶಿಷ್ಟ ಜಾತಿಯ ಪ್ರತಿಭಾವಂತ ವಿದ್ಯಾರ್ಥಿಗಳಿಂದ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಆನ್ಲೈನ್ ಅರ್ಜಿ ಆಹ್ವಾನಿಸಿದೆ. ಅರ್ಹತಾ ಪರೀಕ್ಷೆಗೆ ಇಲಾಖಾ ವೆಬ್ ಸೈಟ್ https://swd.karnataka.gov.in ರಲ್ಲಿ ಆನ್–ಲೈನ್ ಮುಖಾಂತರ ಅರ್ಜಿ ಸಲ್ಲಿಸಬಹುದಾಗಿದೆ. ಆನ್ ಲೈನ್ ಅರ್ಜಿ ಸಲ್ಲಿಸಲು ಮೇ 4 ಕೊನೆಯ ದಿನವಾಗಿದೆ. ಅರ್ಜಿ ಸಲ್ಲಿಸಲು ವಿದ್ಯಾರ್ಥಿಗಳು ಪರಿಶಿಷ್ಟ ಜಾತಿಗೆ ಸೇರಿದ್ದು, ತಹಶೀಲ್ದಾರರವರಿಂದ ಪಡೆದ ಆರ್.ಡಿ ಸಂಖ್ಯೆ ಹೊಂದಿರುವ ಚಾಲ್ತಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಲಗತ್ತಿಸಬೇಕು. ವಿದ್ಯಾರ್ಥಿಗಳು ಕುಟುಂಬದ ವಾರ್ಷಿಕ ಆದಾಯ 2.50 ಲಕ್ಷದೊಳಗಿರಬೇಕು. ವಿದ್ಯಾರ್ಥಿಯು 2025–26ನೇ ಸಾಲಿನಲ್ಲಿ 5ನೇ ತರಗತಿಯಲ್ಲಿ ತೇರ್ಗಡೆಯಾಗಿ ಶೇ.60ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರಾಮುಖ್ಯತೆ ನೀಡಲಾಗುವುದು. ಆಯ್ಕೆಯಾಗುವ ವಿದ್ಯಾರ್ಥಿಗಳಲ್ಲಿ ಬಾಲಕಿಯರಿಗೆ ಶೇ.50 ರಷ್ಟು ಮೀಸಲಾತಿ ನೀಡಲಾಗುವುದು. ಬಡತನ ರೇಖೆಗಿಂತ ಕೆಳಗಿರುವ ಹಾಗೂ ಈ ಯೋಜನೆಯ ಸೌಲಭ್ಯವನ್ನು ಪಡೆಯಲು ವಿಫಲರಾಗಿರುವ ಅತಿ ಹಿಂದುಳಿದ ವರ್ಗದವರಿಗೆ ಮೊದಲನೇ ಆದ್ಯತೆ ನೀಡಲಾಗುವುದು.

ಪೌರ ಕಾರ್ಮಿಕರ, ಸಫಾಯಿ ಕರ್ಮಚಾರಿ ಮಕ್ಕಳು, ಸ್ಮಶಾನಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಕ್ಕಳು, ವಿಕಲಚೇತನರು ಕೋವಿಡ್–19,ಪ್ರಕೃತಿ ವಿಕೋಪದಿಂದ ತಂದೆ–ತಾಯಿಯನ್ನು ಕಳೆದುಕೊಂಡ ಮಕ್ಕಳು, ಸಿಂಗಲ್ ಫ್ಯಾಮಿಲಿ ಮಕ್ಕಳು, ಯೋಜನಾ ನಿರಾಶ್ರಿತರ ಮಕ್ಕಳು, ಮಾಜಿ ಸೈನಿಕರ ಮಕ್ಕಳು, ಕೊಳಗೇರಿಗಳಲ್ಲಿ ವಾಸಿಸುತ್ತಿರುವವರ ಮಕ್ಕಳು, ಕೃಷಿ ಕಾರ್ಮಿಕರ ಮಕ್ಕಳು ಅರ್ಜಿ ಸಲ್ಲಿಸಬಹುದಾಗಿದೆ. ಅರ್ಹ ವಿದ್ಯಾರ್ಥಿಗಳು ಅಗತ್ಯ ದಾಖಲೆಗಳೊಂದಿಗೆ ಮೇ.4 ರೊಳಗಾಗಿ ಇಲಾಖಾ ವೆಬ್ ಸೈಟ್ https://swd.karnataka.gov.in ನಲ್ಲಿ ನೋಂದಾಯಿಸಿಕೊಂಡು ಅಗತ್ಯ ದಾಖಲೆಗಳನ್ನು ಆಯಾ ತಾಲೂಕಿನ ಸಹಾಯಕ ನಿರ್ದೇಶಕರ ಕಚೇರಿಗೆ ಅಥವಾ ಈ ಕಚೇರಿಗೆ ಸಲ್ಲಿಸಬಹುದಾಗಿದೆ. ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಕಚೇರಿ ಸಂಪರ್ಕಿಸಬಹುದಾಗಿದೆ ಎಂದು ಉಪನಿರ್ದೇಶಕರ ಪ್ರಕಟಣೆ ತಿಳಿಸಿದೆ.

# ಏ.22ರಿಂದ ಸಿಇಟಿ ಪ್ರರೀಕ್ಷೆ: ಸುಸೂತ್ರ ನಡೆಸಲು ಎಡಿಸಿ ಸೂಚನೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: 2026ನೇ ಸಾಲಿನ ಸಿಇಟಿ ಪ್ರವೇಶ ಪರೀಕ್ಷೆಗಳು ಏ. 22 ರಿಂದ 24 ರವರೆಗೆ ಜಿಲ್ಲೆಯ 30 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದ್ದು, ಪರೀಕ್ಷಾ ಕಾರ್ಯಗಳಲ್ಲಿ ಯಾವುದೇ ಲೋಪವಾಗದಂತೆ ಸುಸೂತ್ರವಾಗಿ ನಡೆಸುವಂತೆ ಅಪರ ಜಿಲ್ಲಾಧಿಕಾರಿ ಡಾ. ಔದ್ರಾಮ ಅವರು ಸೂಚಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಶನಿವಾರ ಸಿಇಟಿ ಪರೀಕ್ಷೆಗೆ ಸಂಬಂಧಿಸಿದ ಪರೀಕ್ಷಾ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಪರೀಕ್ಷೆಯು ಎರಡು ಅವಧಿಯಲ್ಲಿ ನಡೆಯಲಿದ್ದು, ಜಿಲ್ಲೆಯ ಒಟ್ಟು 30 ಪರೀಕ್ಷಾ ಕೇಂದ್ರಗಳಲ್ಲಿ ಜರುಗಲಿದ್ದು, 13,359 ಅಭ್ಯರ್ಥಿಗಳು ಪರೀಕ್ಷೆಗೆ ನೋಂದಣಿ ಮಾಡಿಕೊಂಡಿದ್ದಾರೆ. ಯಾವುದೇ ಸಮಸ್ಯೆ ಬಾರದ ರೀತಿಯಲ್ಲಿ ಪರೀಕ್ಷೆಗೆ ನಿಯೋಜಿತ ಅಧಿಕಾರಿಗಳು ಮುಂಜಾಗ್ರತೆಯಿಂದ ಪರೀಕ್ಷಾ ನಿಯಮಗಳನ್ವಯ ಕಾರ್ಯ ನಿರ್ವಹಿಸುವಂತೆ ಸೂಚನೆ ನೀಡಿದರು.



ಪ್ರತಿ ಪರೀಕ್ಷಾ ಕೇಂದ್ರಕ್ಕೆ ಓರ್ವ ವೀಕ್ಷಕರಂತೆ ಒಟ್ಟು 30 ವೀಕ್ಷಕರನ್ನು ನೇಮಿಸಿದೆ. ಪರೀಕ್ಷಾ ಕೇಂದ್ರಕ್ಕೆ ನಿಯೋಜಿಸಲಾದ ವೀಕ್ಷಕರು ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕಿಂತ ಒಂದು ಗಂಟೆ ಮೊದಲು ಪರೀಕ್ಷಾ ಕೇಂದ್ರದಲ್ಲಿ ಹಾಜರಿರಬೇಕು. ಪ್ರತಿ ಪರೀಕ್ಷಾ ಕೇಂದ್ರಕ್ಕೆ ಓರ್ವ ಉಪ ಮುಖ್ಯ ಅಧಿಕ್ಷಕರು,ಓರ್ವ ಪ್ರಶ್ನೆಪತ್ರಿಕೆ ಪಾಲಕರು ಹಾಗೂ ಓರ್ವ ವಿಶೇಷ ಸ್ಥಾನಿಕ ಜಾಗೃತದಳ ಸದಸ್ಯರನ್ನು ನೇಮಿಸಿದೆ. ಪರೀಕ್ಷಾ ನಡೆಯುವ ಪರೀಕ್ಷಾ ಕೇಂದ್ರಗಳ ಸುತ್ತಲಿನ 200ಮೀ.ಪ್ರದೇಶವನ್ನು ನಿಷೇಧಿತ ಪ್ರದೇಶ ಎಂದು ಆದೇಶಿಸಲಾಗಿದೆ. ಎಲ್ಲಾ ಪರೀಕ್ಷಾ ಕೇಂದ್ರಗಳಿಗೆ ಮುಂಜಾಗ್ರತಾ ಕ್ರಮವಾಗಿ ಸೂಕ್ತ ಬಂದೋಬಸ್ತ್ ಕೈಗೊಳ್ಳಲು ಸೂಚಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ರಾಮನಗೌಡ ಹಟ್ಟಿ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಚಂದ್ರಶೇಖರ ಹೊಸಮನಿ, ಉಪ ಅಧಿಕ್ಷಕರು, ಮಾರ್ಗಾಧಿಕಾರಿಗಳು, ವೀಕ್ಷಕರು ಸೇರಿದಂತೆ ಪರೀಕ್ಷೆಗೆ ನಿಯೋಜಿತ ಅಧಿಕಾರಿಗಳು ಉಪಸ್ಥಿತರಿದ್ದರು.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR